ಕೊಡಿಸುವಂಥ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನಗಳನ್ನು ಮಾಡಬೇಕು. ಒಂದೇ ಸೂರಿನ ಅಡಿಯಲ್ಲಿ ಎಲ್ಲಾ ಇಲಾಖೆಗಳು ಬಂದಾಗ ಜನ ಸಾಮಾನ್ಯರಿಗೆ ಅದರಿಂದ ತುಂಬಾ ಪ್ರಯೋಜನಗಳು ಆಗುತ್ತವೆ ಎಂಬ ವಿಚಾರವನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಛೇರ್ಮನ್‌ರೆ, ಈ ಆಶ್ರಯ ಯೋಜನೆಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುತ್ತೇವೆಂದು ಹೇಳಿ ಈಗಾಗಲೇ ಬಹಳ ಹಿಂದೆಯೇ ತೀರ್ಮಾನವಾಗಿತ್ತು. ನಮ್ಮ ಸಲಹಾ ಸಮಿತಿ ಸಭೆಯಲ್ಲಿ ಮತ್ತು ಈ ಸದನದಲ್ಲಿಯೂ ಹೇಳಿದರು. ಅದರ ಬಗ್ಗೆ ಇನ್ನು ಸರ್ಕಾರ ಪ್ರಾಮಾಣಿಕವಾಗಿ ತೀರ್ಮಾನ ತೆಗೆದುಕೊಳ್ಳುತ್ತಾರೆನ್ನುವ ಬಗ್ಗೆ ನನಗೆ ನಂಬಿಕೆ ಇಲ್ಲ. ನನಗೆ ಗೊತ್ತಿರುವ ಪ್ರಕಾರ ಹೋದ ಸಲಹಾ ಸಮಿತಿ ಸಭೆಯಲ್ಲಿ ಅಷ್ಟೊಂದು ಪ್ರಗತಿದಾಯಕವಾದ ಮಾತು ಅಲ್ಲಿ ಬರಲಿಲ್ಲ. ಈಗ ಎರಡು ದಿವಸ ಮಾತ್ರ ಅಧಿವೇಶನದ ಸಮಯ ಉಳಿದಿರುವಂಥದ್ದು, ತಮಗೂ ಕೂಡ ಅದರ ಅನುಭವವಾಗಿದೆ. ಕ್ಷೇತ್ರದ ಪರಿಸ್ಥಿತಿ ಏನು ಎನ್ನುವುದರ ಬಗ್ಗೆ ತಮಗೂ ಸ್ಪಷ್ಟವಾಗಿ ಅನುಭವವಾಗಿದೆ. ಮೊದಲನೆಯದಾಗಿ ನಾವು ಶಾಸಕರುಗಳು ಎಷ್ಟೊಂದು ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆಂದರೆ, ನಾವು ನಮ್ಮ ಕ್ಷೇತ್ರಕ್ಕೆ ಶಾಸಕರು, ಮತದಾರರು ನಮ್ಮನ್ನು ಆಯ್ಕೆ ಮಾಡಿರುವುದರಿಂದ ನಾವು ಸಂವಿಧಾನಬದ್ಧವಾಗಿ ಶಾಸಕರಾಗಿರುತ್ತೇವೆ. ನಮ್ಮ ಮೇಲೆ ಸವಾರಿ ಮಾಡುವುದಕ್ಕೆ ಇಬ್ಬರು, ಒಬ್ಬರು ಜಿಲ್ಲಾ ಮಂತ್ರಿಗಳು, ಮತ್ತೊಬ್ಬರು ಲೋಕಸಭಾ ಸದಸ್ಯರು, ಲೋಕಸಭಾ ಸದಸ್ಯರುಗಳಿಗೆ ಎರಡು ಕೋಟಿ ರೂ.ಗಳನ್ನು ಕೊಡುತ್ತಾರೆ. ರಾಜ್ಯ ಸರ್ಕಾರ ಅವರಿಗೆ ಕಾರು ಮತ್ತು ಮಂತ್ರಿ ಸ್ಥಾನ ಮತ್ತು ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಒಂದು ಕಚೇರಿ, ಲೋಕಸಭಾ ಸದಸ್ಯರುಗಳು ಎಲ್ಲಿ ಹೋದಾಗಲೂ ಸಂಪೂರ್ಣವಾಗಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲೆಯ ಅಧಿಕಾರಿಗಳು ಎಲ್ಲರೂ ಅವರ ಹಿಂದೆ ಹೋಗುತ್ತಾರೆ. ಯಾವ ಶಾಸಕರುಗಳಿಗೆ ಆ ಕ್ಷೇತ್ರದಲ್ಲಿ ಎಲ್ಲಾ ಸವಲತ್ತುಗಳು ದೊರಕಬೇಕಾಗಿತ್ತು, ಅದು ಇಲ್ಲ. ಲೋಕಸಭಾ ಸದಸ್ಯರಿಗೆ ಕೆಂಪುದ್ವೀಪ ಮತ್ತು ಅವರಿಗೆ ಎಲ್ಲಾ ರೀತಿಯ ಸವಲತ್ತುಗಳು. ಶಾಸಕರಿಗೆ ೫೦ ಲಕ್ಷ ರೂ.ಗಳನ್ನು ಕೊಡುವುದಾಗಿ ಇವರು ನಿಗದಿ ಮಾಡಿದ್ದಾರೆ. ನನಗೆ ಅನಿಸುತ್ತದೆ, ಇದು ಒಂದು ಕಡೆ, ಮತ್ತೊಂದು ಕಡೆ ಲೋಕಸಭಾ ಸದಸ್ಯರು, ಇನ್ನೊಂದು ಕಡೆ ಜಿಲ್ಲಾ ಮಂತ್ರಿಗಳು, ನಾವು ಜಿಲ್ಲಾ ಮಂತ್ರಿಗಳನ್ನು ಕರೆಯದೆ ಎಲ್ಲೂ ಸಮಾರಂಭವನ್ನು ಮಾಡುವಂತಿಲ್ಲವೆ? ಇಲ್ಲವೆ ಇಲ್ಲ, ನಾವು ಸಮಾರಂಭವನ್ನು ಮಾಡಬೇಕೆಂದರೆ, ಜಿಲ್ಲಾ ಮಂತ್ರಿಗಳ ಹೆಸರನ್ನು ಹಾಕಲೇಬೇಕು. ಲೋಕಸಭಾ ಸದಸ್ಯರ ಹೆಸರನ್ನು ಹಾಕಬೇಕು. ನನ್ನ ದೃಷ್ಟಿಯಲ್ಲಿ ಹೊರಗಡೆಯಿಂದ ಬರುವ ರಾಜ್ಯದ ಮುಖ್ಯಮಂತ್ರಿಗಳು ಬರಲಿ, ಅವರು ಉದ್ಘಾಟನೆಗೆ ಬರಲಿ ನಮಗೆ ಸಂತೋಷ, ಬೇರೆ ಯಾವುದೆ ಇಲಾಖೆಯ ಮಂತ್ರಿಗಳು ಬಂದರೂ

ಸಂತೋಷ. ಜಿಲ್ಲಾ ಮಂತ್ರಿಗಳದ್ದು ಅಲ್ಲಿ ದರ್ಬಾರು, ಮತ್ತು ಲೋಕಸಭಾ ಸದಸ್ಯರ ದರ್ಬಾರು. ಇದರ ಜೊತೆಗೆ ಲೋಕಸಭಾ ಸದಸ್ಯರಿಗೆ ಎರಡು ಕೋಟಿ ರೂ.ಗಳು ಇದೆ, ಕೊಳವೆಬಾವಿ ತೆಗೆಯಬೇಕೇ ದುಡ್ಡು, ಅಂಗನವಾಡಿ ಕಟ್ಟಡ ಬೇಕೇ ದುಡ್ಡು, ಏನು ಬೇಕಾದರೂ ದುಡ್ಡು ಬಿಡುಗಡೆ ಮಾಡುತ್ತಾರೆ. ಈ ಪರಿಸ್ಥಿತಿ ಇರುವಾಗ ನಾನು ತಮಗೆ ಹೇಳುತ್ತಿದ್ದೇನೆ. ನಮ್ಮ ಕ್ಷೇತ್ರದಲ್ಲಿ ಚುನಾಯಿತರಾದ ನಮಗೆ ಸ್ವಾತಂತ್ರ್ಯವಿಲ್ಲವೆನ್ನುವ ಭಾವನೆಯಾಗಿದೆ. ಮಾನ್ಯ ಖರ್ಗೆಯವರು ಇಲ್ಲಿಯೇ ಇದ್ದಾರೆ, ಬಹಳ ಹಿರಿಯ ಸಚಿವರು, ಈ ರಾಜ್ಯದ ಬಗ್ಗೆ ಅಪಾರವಾದ ಅನುಭವ ಇರತಕ್ಕಂಥವರು, ಮಾನ್ಯ ಎಂ.ಪಿ. ಪ್ರಕಾಶ್‌ರವರು ಇದ್ದಾರೆ, ಇಲ್ಲಿಯೇ ಇಬ್ಬರು ಹಿರಿಯ ಸಚಿವರು ಕುಳಿತಿದ್ದಾರೆ. ನಾನು ಅತ್ಯಂತ ಕಳಕಳಿಯಿಂದ ನಿವೇದನೆ ಮಾಡಿಕೊಳ್ಳುತ್ತಿದ್ದೇನೆ. ನೀವು ವಿರೋಧ ಪಕ್ಷದ ಕಡೆಗೆ ಬರಬಹುದು, ನಾಳೆ ಶಾಸಕರಾಗಿ ಇರಬಹುದು, ಶಾಸಕರಾಗಿಯೂ ಕೂಡ ಇದ್ದೀರಿ. ನನಗೆ ಅನಿಸುತ್ತದೆ, ಆಶ್ರಯ ಸಮಿತಿಯ ವಿಚಾರದಲ್ಲಿ ಸರ್ಕಾರ ಒಂದು ಸ್ಪಷ್ಟ ನೀತಿಯನ್ನು ಕೈಗೊಳ್ಳಬೇಕು. ಜೊತೆಗೆ ಲೋಕಸಭಾ ಸದಸ್ಯರ ಒತ್ತಡದ ಬಗ್ಗೆ ಖಂಡಿತವಾಗಿ ಸರ್ಕಾರ ಒಂದು ಆದೇಶವನ್ನು ಹೊರಡಿಸಬೇಕು. ಯಾರು ಲೋಕಸಭಾ ಸದಸ್ಯರು, ನಮ್ಮ ಕ್ಷೇತ್ರಕ್ಕೆ, ಯಾರು ಜಿಲ್ಲಾ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ, ನಮ್ಮ ಕ್ಷೇತ್ರಕ್ಕೆ ನಾವು, ತಾವು ಬನ್ನಿ, ನಿಮ್ಮ ಇಲಾಖೆಯ ಮಂತ್ರಿಗಳು ಬರಲಿ, ನೀವು ಉದ್ಘಾಟನೆ ಮಾಡಿ ನಿಮಗೆ ನಾವು ಶರಣು ಶರಣಾರ್ಥಿ. ನಮ್ಮದೇನು ಅಡ್ಡಿ ಇಲ್ಲ, ಜಿಲ್ಲಾ ಮಂತ್ರಿಗಳ ಜೊತೆಯಲ್ಲಿ ಬಂದರೆ, ಈ ಪಾಳೆಗಾರಿಕೆಯಿಂದ ಯಾವುದೇ ಪಕ್ಷದ ಶಾಸಕರು ಇರಬಹುದು. ಇದು ಬಹಳ ಅತ್ಯಂತ ನೋವಿನ ಪ್ರಸಂಗ. ಪ್ರಜಾತಂತ್ರ ವ್ಯವಸ್ಥೆಗೆ ಅಪಾಯಕಾರಿ.

ಯಾರು ಈ ಲೋಕಸಭಾ ಸದಸ್ಯರುಗಳು. ನಮ್ಮನ್ನು ಬಂದು ಕೇಳುವುದಕ್ಕೆ, ಒಂದು ನಿಮಿಷ ಕೇಳಿ ಹೇಳುತ್ತೇನೆ. ಒಂದು ಟಾರ್ ಹಾಕಬೇಕಾದರೂ ನಾವು ಅವರನ್ನು ಕರೆಯಬೇಕು.

ಛೇರ್ಮನ್ : ಬೇರೆ ನಿಯಮದಡಿಯಲ್ಲಿ ಇದನ್ನು ತಂದು ಚರ್ಚೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಛೇರ್ಮನರೆ, ಬೇರೆ ನಿಯಮದಡಿ ತರುವುದು ಬೇರೆ. ಅಧಿವೇಶನ ನಾಳೆ, ನಾಡಿದ್ದು ಮುಗಿಯುತ್ತದೆ. ಸರ್ ತಾವು ಒಂದು ನಿಮಿಷ ಕೇಳಿ. ದಯಮಾಡಿ ತಮಗೂ ಇದರಿಂದ ಅನುಕೂಲವಾಗುತ್ತದೆ.

ಛೇರ್ಮನ್ : ಎಲ್ಲರಿಗೂ ಅನುಕೂಲವಾಗುತ್ತದೆ, ಬೇರೆ ನಿಯಮದಡಿಯಲ್ಲಿ ಇದನ್ನು ತಂದರೆ ಸರ್ಕಾರಕ್ಕೆ ಕೂಡ ಉತ್ತರವನ್ನು ಕೊಡಲಿಕ್ಕೆ ಅನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಸರ್, ಇದು ಒಳ್ಳೆಯ ಸೂಚನೆ ಅಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು : ಮಾನ್ಯ ಛೇರ್ಮನರೇ, ಮಾನ್ಯ ಸದಸ್ಯರು ಎಂ.ಪಿ.ಗಳು ಯಾರು ಕೇಳುತ್ತಾರೆ. ಎಂ.ಪಿ.ಗಳು ನಮ್ಮ ಕ್ಷೇತ್ರದಲ್ಲಿ ಕೈ ಹಾಕಲಿಕ್ಕೆ ಅವರು ಯಾರು ಎಂದು ಹೇಳುತ್ತಿದ್ದಾರೆ. ಡಿಸ್ಟ್ರಿಕ್ಟ್ ಇನ್‌ಚಾರ್ಜ್ ಮಿನಿಸ್ಟರ್ ಇದಕ್ಕೆ ಅವರು ಏಕೆ? ಅಭಿವೃದ್ಧಿಯ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ನೋಡಿಕೊಳ್ಳುತ್ತಾರೆ. ಆ ಕ್ಷೇತ್ರಗಳನ್ನು ಪ್ರತಿನಿಧಿಸತಕ್ಕಂಥ ಒಬ್ಬ ಎಂ.ಪಿ.ಯವರು ಕೂಡ ಅಭಿವೃದ್ಧಿ ಬಗ್ಗೆ ನೋಡತಕ್ಕಂಥ ಕರ್ತವ್ಯ ಅವರದ್ದು ಕೂಡ ಇದೆ. ಅವರು ನೋಡಬಾರದು ಬರೀ ನನಗೆ ಒಬ್ಬನಿಗೆ ಕೊಡಿ ಎಂದು ಅಂದರೆ ಇದು ಕೂಡ ಪಾಳೆಗಾರಿಕೆ ಅಲ್ಲವೇ? ನಾನು ಒಂದು ನಿಮಿಷದಲ್ಲಿ ಹೇಳುತ್ತೇನೆ. ಯಾವಾಗ ಅವರು ಕೂಡ ಆ ಶಾಸಕರ ಕ್ಷೇತ್ರಕ್ಕೆ ಒಬ್ಬ ಎಂ.ಪಿ.ಯವರು ಪ್ರತಿನಿಧಿಸುತ್ತಾರೆ. ಅವರು ಕೂಡ ಜನಗಳಿಂದ ಮತಗಳನ್ನು ತೆಗೆದುಕೊಂಡು ಬರುತ್ತಾರೆ. ಅದೇ ರೀತಿಯಾಗಿ ಎಂ.ಎಲ್.ಎಯವರು ಕೂಡ ಬರುತ್ತಾರೆ. ಅದೇ ರೀತಿಯಾಗಿ ಜಿಲ್ಲಾ ಪಂಚಾಯಿತಿ ಸದಸ್ಯರುಗಳು ಕೂಡ ಬರುತ್ತಾರೆ. ಅವರವರ ವ್ಯಾಪ್ತಿಯಲ್ಲಿ ಅವರಿಗೆ ಇರತಕ್ಕಂಥ ಅಧಿಕಾರ ವ್ಯಾಪ್ತಿಯಂತೆ ಅಧಿಕಾರವನ್ನು ಚಲಾಯಿಸುತ್ತಾರೆ. ಆದರೆ ಈ ಎಂ.ಪಿ.ಗಳು ಬರಬಾರದು, ಮಂತ್ರಿಗಳು ಏನು ಹೇಳಬಾರದು, ಎಲ್ಲವನ್ನು ನಮಗೆ ಬಿಟ್ಟುಬಿಡಿ ಎನ್ನುವುದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲ. ಪದೇ ಪದೇ ಅವರು ಇಂಟರ್‌ಫಿಯರ್ ಆಗುತ್ತಾರೆ ಅದು ಸರಿಯಲ್ಲವೆಂದರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಅವರು ಬರುವುದೇ ಬೇಡ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಛೇರ್ಮನರೆ, ಅವರ ಪ್ರಭಾವ, ಅವರ ಒತ್ತಡ, ಅದು ಆಗಕೂಡದು. ಅವರು ಬರುವುದೇ ಬೇಡವೆಂದು ನಾವೇಗೆ ಹೇಳುವುದಕ್ಕಾಗುತ್ತದೆ. ಅವರು ಬರಲಿ, ಅವರ ನಮ್ಮದೇನು ಇಲ್ಲ; ಅವರು ಬರಲಿ ಹೋಗಲಿ. ನಾವೇನು ಅದನ್ನ ಒಂದು ಕಂಟ್ರಿ ಮಾಡಿಕೊಳ್ಳುವುದಕ್ಕಾಗುತ್ತದೆಯೇ? ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ : ನಾನು ನಿಮ್ಮ ಹಿತೈಷಿ, ಅವರು ಹೇಳಿದ್ದ ಮಾತನ್ನು ಮಾನ್ಯ ಛೇರ್ಮನರೆ ನೀವೇನಾದರೂ ಕೇಳಿ ಬಿಟ್ಟರಾ ನಿಮ್ಮ ಗ್ರಹಚಾರ. ಯಾರು ಎಂ.ಪಿ.ಗಳು ಎಂದು ನೀವು ಕೇಳಿ ಸಿಕ್ಕಿ ಹಾಕಿಕೊಳ್ಳಬೇಡಿ. ಅವರು ಬೇಕಾಗಿದ್ದರೆ ಕೇಳಬಹುದು. ನಿಮ್ಮ ಕ್ಷೇಮ ನಮಗೆ ಮುಖ್ಯ.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಛೇರ್ಮನರೆ, ನಿಮ್ಮ ಕ್ಷೇಮದ ಪ್ರಶ್ನೆ ಒಂದೇ ಉದ್ಭವವಾಗುವುದಿಲ್ಲ, ಮಾನ್ಯ ರಮೇಶ್‌ಕುಮಾರ್‌ರವರೆ, ಇವತ್ತು ಏನು ಪ್ರಶ್ನೆ ಬಂದಿದೆ ಎಂದರೆ, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಪ್ರಕಾರ, ಆ ಎಂ.ಪಿ.ಗಳಾಗಲಿ,

ಆ ಜಿಲ್ಲಾ ಉಸ್ತುವಾರಿ ಸಚಿವರುಗಳಾಗಲಿ, ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿರುತ್ತಾರೆ. ಅದನ್ನಾದರೂ ಕಾರ್ಯಗತವನ್ನು ಮಾಡಲಿಕ್ಕೆ ಬೆಂಬಲವನ್ನು ಕೊಟ್ಟರೆ ನಮಗೆ ತುಂಬಾ ಸಂತೋಷ. ಇವತ್ತು ಏನಾಗಿದೆ ಮಾನ್ಯ ಛೇರ್ಮನರೆ, ಇನ್ನು ಅಧಿವೇಶನ ಮೂರು ದಿವಸ ಇದೆ. ಸರ್ಕಾರ ಘೋಷಣೆಯನ್ನು ಮಾಡಿತ್ತು. ಇದನ್ನೇ ಹೇಳಿದ್ದರು, ಈ ೭ನೇ ತಾರೀಖಿನೊಳಗಾಗಿ ಬಜೆಟ್ ಅಧಿವೇಶನ ಮುಗಿಯುವುದರೊಳಗಾಗಿ ನಾವು ಆಶ್ರಯ ಸಮಿತಿಗೆ ತಿದ್ದುಪಡಿಯನ್ನು ತಂದು ಶಾಸಕರ ಅಧ್ಯಕ್ಷತೆಯನ್ನು ಮಾಡುತ್ತೇವೆಂದು ಹೇಳಿದ್ದರು. ಇದರ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಕೂಡ ಪ್ರಸ್ತಾಪ ಮಾಡಿದ್ದರು. ನಮ್ಮ ಜಿಲ್ಲಾ ಮಂತ್ರಿಗಳಿಗೆ ಪಾಪ ಇದರಲ್ಲಿ ಏನಾದರೂ ಅವರಿಗೆ ಅವಕಾಶ ಇದೆಯಾ, ಅವರು ಏನಾದರೂ ಬೆಂಬಲದ ಬಗ್ಗೆ ಈ ಸರ್ಕಾರದ ಹತ್ತಿರ ಮಾತನಾಡಿದ್ದಾರೆಯಾ? ಒಟ್ಟಿಗೆ ತೀರ್ಮಾನವಾಗಿದೆಯಾ? ಇವತ್ತು ಏನಾಗಿದೆ ಎಂದರೆ, ಈ ಸದನದಲ್ಲಿಯೇ ಆಶ್ವಾಸನೆ ಕೊಟ್ಟಿದ್ದರೂ ಕೂಡ ಅದು ಕಾರ್ಯಗತವಾಗಲಿಲ್ಲವೆಂದರೆ, ಆಗ ಅವರು ನಮ್ಮ ಬೆನ್ನ ಮೇಲೆ ಬಂದು ನಿಂತುಕೊಂಡರೆ ನಿಜಕ್ಕೂ ಕೂಡ ಆ ಎಂ.ಪಿ.ಗಳ ಬಗ್ಗೆ ಜಿಲ್ಲಾ ಮಂತ್ರಿಗಳ ಬಗ್ಗೆ ಸಂತೋಷವಾಗುತ್ತಿತ್ತು. ಆದರೆ ಅವರಿಗೆ ಏನು ಅಧಿಕಾರವಿಲ್ಲ.

ಶ್ರೀ ಅಂಜನಮೂರ್ತಿ (ವಸತಿ ಸಚಿವರು) : ಮಾನ್ಯ ಹಿರಿಯ ಸಚಿವರಾದ ಶ್ರೀ ಈಶ್ವರಪ್ಪನವರು ನಮಗೆ ಏನು ಅಧಿಕಾರವಿಲ್ಲ ಎನ್ನುವ ಪ್ರಶ್ನೆಯಲ್ಲ ಮುಖ್ಯ. ಇವತ್ತು ಕರ್ನಾಟಕ ರಾಜ್ಯದಾದ್ಯಂತ ಪ್ರತಿಯೊಬ್ಬರು ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿ ರಚನೆಯಾಗಬೇಕೆಂದು ಉದ್ದೇಶವಿರುವುದು. ಕಳೆದ ಸಾರಿ ಇದೇ ಸಧನದಲ್ಲಿ ನಾವು ಈ ಬಗ್ಗೆ ಒಂದರ ಬಿಲ್‌ಅನ್ನು ಪಾಸು ಮಾಡಿ ಪಂಚಾಯಿತಿಗೆ ಕೊಟ್ಟಿದ್ದೇವೆ. ಶಾಸಕರ ಅಧ್ಯಕ್ಷತೆಯಲ್ಲಿ ಆಗಬೇಕಾದ ಕೆಲವು ಕಾನೂನಿನ ತೊಡಕು ಇದೆ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಉಪಮುಖ್ಯಮಂತ್ರಿಗಳು ಸಹ ಹೇಳಿದ್ದಾರೆ, ಕೆಲವು ತೊಡರುಗಳನ್ನು ನಿವಾರಿಸಿ ಕ್ರಮ ಕೈಗೊಳ್ಳುತ್ತೇವೆ. ಶಾಸಕರ ಮಾತನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಜಾಗ್ರತೆಯಾಗಿ ಮಾಡುತ್ತೇವೆ, ಈ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಕಂದಾಯ ಮಂತ್ರಿಗಳು ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಮನವಿ, ಇಬ್ಬರು ಕೂಡ ಪ್ರಭಾವಿ ಮಂತ್ರಿಗಳು ಇದ್ದಾರೆ, ಇದೇ ಅಧಿವೇಶನದಲ್ಲಿ ಮುಗಿಸುತ್ತೇನೆಂದರೆ ಈ ಬಗ್ಗೆ ರೆಕಾರ್ಡ್‌ಗೆ ಹೋಗಿದೆ. ಹೀಗಾಗಿ ತುಂಬಾ ಸ್ಪಷ್ಟವಾಗಿ ಅವರು ಏನು ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರೊ, ಆ ಪ್ರಕಾರವಾಗಿ ಇದರಿಂದ ಎಲ್ಲಾ ಶಾಸಕರಿಗೂ ಕೂಡ ಅನುಕೂಲವಾಗುತ್ತದೆ ಮತ್ತು ಜನರಿಗೂ ಕೂಡ ಅನುಕೂಲವಾಗುತ್ತದೆ, ಆ ದಿಕ್ಕಿನಲ್ಲಿ

ಅವರು ಕ್ರಮ ತೆಗೆದುಕೊಳ್ಳುತ್ತಾರೋ ಎಂಬ ಬಗ್ಗೆ ನೇರವಾಗಿ ಉತ್ತರವನ್ನು ಕೊಡಬೇಕು. ಅದರ ಬಗ್ಗೆ ಆದಷ್ಟು ಬೇಗ ಅಲ್ಲ, ಇಲ್ಲಿ ಪ್ರಶ್ನೆ ಬಂದಿರುವುದು ತಾವೇ ವಸತಿ ಸಚಿವರಾಗಿದ್ದೀರಿ, ಆಶ್ರಯ ಸಮಿತಿಯ ಬಗ್ಗೆ ತಾವೇ ಅನುಕೂಲ ಮಾಡಿಕೊಳ್ಳಬೇಕಾಗುತ್ತದೆ. ಹೀಗಾಗಿ ಇದರ ಬಗ್ಗೆ ತಾವು ತುಂಬಾ ಸ್ಪಷ್ಟವಾಗಿ ಹೇಳಬೇಕು. ಈ ಸದನದಲ್ಲಿಯೇ ಇನ್ನು ೩ ದಿನದೊಳಗಾಗಿ ಈ ಒಂದು ಆಶ್ರಯ ಸಮಿತಿಗೆ ಶಾಸಕರ ಅಧ್ಯಕ್ಷತೆಯಲ್ಲಿ ಘೋಷಣೆಯನ್ನು ಮಾಡುತ್ತೀರಾ ಅಥವಾ ತಿದ್ದುಪಡಿಯನ್ನು ತರುತ್ತೀರಾ? ಇದರ ಬಗ್ಗೆ ತಾವು ಸ್ಪಷ್ಟ ಮಾಡಬೇಕು.

ಶ್ರೀ ಅಂಜನಮೂರ್ತಿ : ಕೆಲವು ಕಾನೂನಿನ ಸಾಧಕಬಾಧಕಗಳನ್ನು ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆ ಶಾಸಕರ ಒಂದು ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡುತ್ತೇವೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಇದರ ಬಗ್ಗೆ ಮೊನ್ನೆ ದಿವಸ ಚರ್ಚೆಯಾದಾಗ ಮಾನ್ಯ ಎಂ.ಪಿ.ಪ್ರಕಾಶ್‌ರವರು ನಾವು ಎರಡು ದಿವಸದೊಳಗೆ ಬಿಲ್ಲನ್ನು ತರುತ್ತೇವೆಂದು ಸದನಕ್ಕೆ ಹೇಳಿದ್ದರು. ನಂತರ ಇದು ಸೆಷನ್ ಮುಗಿಯುವುದರೊಳಗಡೆ ಎಂದು ಆಯಿತು.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಮಸೂದೆಯನ್ನು ತರುತ್ತೇವೆ ಎನ್ನುವುದಕ್ಕಿಂತಲೂ, ಈ ವಿಚಾರದಲ್ಲಿ ಶಾಸಕರಿಗೆ ಅಲ್ಲಿ ಇರಬೇಕು, ಈಗಲೂ ಕೂಡ ಹಿರಿಯ ಸಚಿವರ ಜೊತೆಗೆ ನಾನು ಮಾತನಾಡಿದೆ, ಅವರು ಕೂಡ ಇದರ ಬಗ್ಗೆ ಒಲವನ್ನು ತೋರಿಸಿದ್ದಾರೆ. ನಾವು ಏತಕ್ಕಾಗಿ ಯೋಚನೆ ಮಾಡಬೇಕಾಗುತ್ತದೆಂದರೆ, "ಬೇಲೂರು ಅಧಿವೇಶನದಲ್ಲಿ" ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡಿದಂತಹ ನಿರ್ಣಯಗಳಿಗೆ ಅನುಗುಣವಾಗಿ ಕಳೆದ ಬಾರಿ ಇಂಥದೊಂದು ತಿದ್ದುಪಡಿಯನ್ನು ಸರ್ಕಾರ ತಂದಿದೆ. ಆದರೆ ಇಲ್ಲಿರತಕ್ಕಂತಹ ಶಾಸಕರಿಗೆ ಯಾವುದೇ ತರಹದ ಮಾನ್ಯತೆಗಳು ಇಲ್ಲದೆ ಇರುವುದು ಮತ್ತು ಮುಖ್ಯವಾಗಿ ಮನೆಗಳ ವಿತರಣೆಯ ಬಗ್ಗೆ, ಈಗ ಅನೇಕ ವಿಚಾರದಲ್ಲಿ ಎಎಸ್‌ಎಂಗಳಿಗೆ ಅವರಿಗೆ ಜವಾಬ್ದಾರಿಯನ್ನು ಕೊಡಬೇಕೆಂದು ಮಾಡಿದ್ದೆವು, ಅದನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ಹಾಗೆಯೇ ಶಿಕ್ಷಕರನ್ನು ಅವರಿಗೆ ಕೊಡಬೇಕೆಂದು ಮಾಡಿದ್ದೆವು, ಅದನ್ನು ಕೂಡ ವಾಪಸ್ಸು ತೆಗೆದುಕೊಂಡಿದ್ದೇವೆ. ಅದೇ ರೀತಿಯಾಗಿ ಈಗ ಅವರು ಒಂದು ಸಲಹೆಯ ಬಗ್ಗೆ ಕೂಡ ಯೋಚನೆ ಮಾಡುತ್ತಿದ್ದೇವೆ. ಪಂಚಾಯಿತಿಯವರು ನೇರವಾಗಿ ಅವರು ಶಿಫಾರಸ್ಸು ಮಾಡಿ ಬಿಪಿಎಲ್ ಲಿಸ್ಟ್‌ಗಿಂತ ಕೆಳಗಿರತಕ್ಕಂಥದ್ದು, ಶಾಸಕರ ಅಧ್ಯಕ್ಷತೆಯಲ್ಲಿರುವಂತಹ ಒಂದು ಆಶ್ರಯ ಸಮಿತಿಯ ಮುಂದೆ ಅದರ ಅಂತಿಮವಾಗಿ ಪರಿಷ್ಕರಣಪಟ್ಟಿಯನ್ನು ಒಪ್ಪಿಗೆ ಕೊಡಬೇಕೆನ್ನುವುದು ಆದರೆ ಅದು ಎರಡು ಕಡೆಗೂ ಬರುತ್ತದೆ. ಒಂದು ಪಂಚಾಯಿತಿಯವರದು ತಮ್ಮ ಮಾತು ಇರುತ್ತದೆ, ಅದು ಹಿಂದೆ ಇದ್ದದ್ದು ಗ್ರಾಮಸಭಾ, ಗ್ರಾಮಸಭಾಗಳು ನಿರ್ಣಯವನ್ನು

ಮಾಡುತ್ತಿದ್ದವು. ಈಗ ಗ್ರಾಮಸಭೆಗಳನ್ನು ಬಿಟ್ಟು ಪಂಚಾಯಿತಿಗೆ ಅಧಿಕಾರವನ್ನು ಕೊಟ್ಟಿದ್ದಾರೆ.

ಪಂಚಾಯಿತಿಯವರು ಬಡತನ ರೇಖೆಗಿಂತ ಕೆಳಗೆ ಇರತಕ್ಕಂತಹವರು ಹೇಗೆ ಅಂತ, ಶಾಸಕರ ಅಧ್ಯಕ್ಷತೆಯಲ್ಲಿ ಇರತಕ್ಕಂತಹ ಸಮಿತಿಗೆ ಅದನ್ನು ಕಳುಹಿಸಿಕೊಟ್ಟು ಅವರು ಅಂತಿಮವಾಗಿ ನಿರ್ಣಯ ಮಾಡಬೇಕೆಂಬುದು ಅದರ ಬಗ್ಗೆ ಸ್ಥೂಲವಾಗಿ ಚರ್ಚೆಯಾಗುತ್ತದೆ. ಇದರ ಬಗ್ಗೆ ಸಚಿವ ಸಂಪುಟದ ಸಭೆಯಲ್ಲಿ ಚರ್ಚೆ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ತಾವು ಈ ಸೆಷನ್‌ನಲ್ಲಿಯೇ ಮುಗಿಸುತ್ತೀರಾ ಎನ್ನುವುದು ಪ್ರಶ್ನೆ? ಇದು ಏನಾಗುತ್ತದೆಂದರೆ...

ಶ್ರೀ ವಾಟಾಳ್ ನಾಗರಾಜ್ : ಇನ್ನು ಮೂರು ದಿನದಲ್ಲಿ ಇದು ಮುಗಿಯಬೇಕು ಮತ್ತು ೫೦ ಲಕ್ಷ ರೂಪಾಯಿಗಳು ಏನು ಶಾಸಕರ ಅನುದಾನವಿದೆ ಅದನ್ನು ಒಂದು ಕೋಟಿ ರೂಪಾಯಿಗಳನ್ನಾಗಿ ಮಾಡಬೇಕು. ಮಾನ್ಯ ಹಣಕಾಸು ಸಚಿವರು ಉತ್ತರ ಕೊಡುವಾಗ ಒಂದು ಕೋಟಿ ರೂಪಾಯಿಗಳು ಶಾಸಕರ ನಿಧಿ ಕೊಡಬೇಕು. ಇಡೀ ಸದನದಲ್ಲಿ ಒಂದು ಕೋಟಿ ರೂಪಾಯಿಗಳು ಶಾಸಕರ ನಿಧಿ ಕೊಡಬೇಕೆಂಬ ಬಗ್ಗೆ ಒತ್ತಾಯವನ್ನು ಮಾಡಿದ್ದೇನೆ. ಒಂದು ಕೋಟಿ ರೂಪಾಯಿಯಮ್ನ ಕೊಡುವ ಬಗ್ಗೆ ಮಾನ್ಯ ಉಪಮುಖ್ಯ ಮಂತ್ರಿಗಳು ಆ ಬಗ್ಗೆ ತೀರ್ಮಾನ ಮಾಡಿ ಈ ಸದನದ ಮುಂದೆ ಮಂಡಿಸಬೇಕು. ಆಶ್ರಯ ಸಮಿತಿಯ ಬಗ್ಗೆ ನೀವು ಇನ್ನು ೪ ತಿಂಗಳಲ್ಲಿ ಸೇರತಕ್ಕಂತಹ ಶಾಸನಸಭೆಯಲ್ಲಿ ಅಲ್ಲ, ನಾಳೆ ನಾಡಿದ್ದು ತಾವು ಮಸೂದೆಯನ್ನು ತರುವುದಾದರೆ ಒಪ್ಪಿಗೆಯನ್ನು ಕೊಡುತ್ತೇನೆ, ತಾವು ಇದೇ ಅಧಿವೇಶನದಲ್ಲಿ ಮಸೂದೆಯನ್ನು ತರಬೇಕು. ಈಗ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಶಾಸಕರಾದ ಶ್ರೀ ವಾಟಾಳ್‌ನಾಗರಾಜ್‌ರವರು ಸದನದ ಬಾವಿಗೆ ಬಂದರು)

ಛೇರ್ಮನ್ : ಮಾನ್ಯ ಪ್ರಭಾಕರ್ ಬಂಗೇರಾವರೆ, ನಿಮ್ಮ ಅವಧಿ ಮುಗಿಯುತ್ತದೆ, ನೀವು ಮಾತನಾಡಿ.

ಶ್ರೀ ಕೆ.ಎಸ್.ಈಶ್ವರಪ್ಪ : ಈ ಸದನದಲ್ಲಿ ಕೊಟ್ಟಂತಹ ಆಶ್ವಾಸನೆಯನ್ನು ಕೂಡ ಮಾನ್ಯ ಕಂದಾಯ ಸಚಿವರು ಎರಡನೇ ದಿನದಲ್ಲಿ ಬಿಲ್‌ನ್ನು ತರುತ್ತೇವೆಂದು ಹೇಳಿದರು. ಅದಾದ ನಂತರ ತಾವು ಏನು ಹೇಳಿದ್ದೀರಿ, ೩೧ನೇ ತಾರೀಖಿನಂದು ಖಂಡಿತ ಈ ಬಿಲ್ಲನ್ನು ಪಾಸು ಮಾಡುತ್ತೇನೆಂದು ಹೇಳಿದ್ದೀರಾ? ಈಗ ತಾವು ಹೇಳಬೇಕು. ೩೧ನೇ

ತಾರೀಖಿನೊಳಗಡೆಯೇ ಆ ಬಿಲ್ಲನ್ನು ಪಾಸು ಮಾಡಿ ಆಶ್ರಯ ಸಮಿತಿಯನ್ನು ಧೋಷಣೆ ಮಾಡುತ್ತೇವೆಂದು ಹೇಳಿದ್ದೀರಾ? ಒಬ್ಬ ಮಾನ್ಯ ಸದಸ್ಯರು : ಆಶ್ರಯ ಸಮಿತಿಯೂ ಇನ್ನು ೯ ತಿಂಗಳಿಂದ ಆಗಿಯೇ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಇದರ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ಯೋಚನೆ ಮಾಡುತ್ತಿದೆ. ಸಾಧ್ಯವಾದಷ್ಟು ಮಟ್ಟಿಗೆ ಅದರ ಬಗ್ಗೆ ತಿದ್ದುಪಡಿಯನ್ನು ತರತಕ್ಕಂತಹ ಪ್ರಯತ್ನವನ್ನು ಮಾಡುತ್ತೇವೆ. ತಾವು ರೆಕಾರ್ಡ್‌ನ್ನು ತರಿಸಿ ನೋಡಬಹುದು.

ಛೇರ್ಮನ್: ಮಾನ್ಯ ಪ್ರಭಾಕರ ಬಂಗೇರಾರವರು ಮಾತನಾಡಲಿ.

ಶ್ರೀ ಅರಗ ಜ್ಞಾನೇಂದ್ರ : ಈ ಸರ್ಕಾರಕ್ಕೆ ಒಟ್ಟಾರೆಯಾಗಿ ಹೇಳುವುದಾದರೆ ಯಾವುದೇ ಸಮಿತಿಯನ್ನು ಮಾಡುವುದಕ್ಕೆ ಇಷ್ಟವಿಲ್ಲ.

ಛೇರ್ಮನ್ : ಮಾನ್ಯ ಪ್ರಭಾಕರ ಬಂಗೇರಾರವರೆ, ತಾವು ಭಾಷಣವನ್ನು ಪ್ರಾರಂಭಿಸಿ ಹಾಗೂ ಬೇಗ ಮುಗಿಸಬೇಕು.

ಶ್ರೀ ಅರಗ ಜ್ಞಾನೇಂದ್ರ : ಬಗರ್‌ಹುಕುಂ ಕಮಿಟಿ ಮುಂದಿನ ತಿಂಗಳು ನಿಮ್ಮ ವಾಯಿದೆ ಮುಗಿದು ಹೋಗುತ್ತದೆ, ಫಾರಂ ನಂ. ೫೦, ೫೩ ರ ಬಗ್ಗೆ ಏನು ಮಾಡುತ್ತೀರಿ. ಸುಮ್ಮನೆ ಒಂದು ವರ್ಷ ಆಗಿ ಯಾವುದೇ ಕಮಿಟಿಗಳನ್ನು ಮಾಡದೆ ನಿರರ್ಥಕವಾದರೆ ಬಡವರ ಕೆಲಸ ಮಾಡುವುದು ಹೇಗೆ ಸಾರ್. ಆಶ್ರಯ, ಆರಾಧನ....

(ಗೊಂದಲ)

ಛೇರ್ಮನ್ : ಇಬ್ಬಬ್ಬರು ಒಟ್ಟಿಗೆ ಮಾತನಾಡಿದರೆ ಹೇಗೆ ?

ಶ್ರೀ ಎಸ್. ರಾಜೇಂದ್ರನ್ : ಎಂ.ಪಿ. ಇದ್ದಾರೆ, ಅವರು ಏನು ಮಾಡುತ್ತಾರೆಂದರೆ, ಶಾಸಕರ ಕೆಲಸಕ್ಕೆ ಅಡ್ಡ ಬರುತ್ತಿದ್ದಾರೆ. ನಾನು ಅವರು ಬರಬಾರದು ಎಂದು ಹೇಳಲಿಲ್ಲ, ನಾವು ಎಂ.ಪಿ. ಸ್ಥಾನದಲ್ಲಿದ್ದೇವೆ, ಯಾವ ಯಾವ ಕೆಲಸಗಳಿಗೆ ಹೋಗಬೇಕು, ಯಾವ ಯಾವ ಕೆಲಸದಲ್ಲಿ ಕೈ ಇಡಬೇಕೆಂಬ ಬಗ್ಗೆ ಚಿಂತನೆಯನ್ನು ಮಾಡಬೇಕು. ಏನು ಗ್ರಾಮಪಂಚಾಯಿತಿಯ ಕ್ಲರ್ಕ್ ಟ್ರಾನ್ಸ್‌ಫರ್ ಮಾಡಿಸುವ ಬಗ್ಗೆ ಮಾಡುತ್ತಾರೆ, ನನ್ನ ಜಿಲ್ಲೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಎಂ.ಪಿ. ಮುಖಾಂತರ ಬಂದರೆ ಅವರಿಗೆ ಟ್ರಾನ್ಸ್‌ಫರ್ ಮಾಡಿಸುತ್ತಾರೆ. ಹಾಗಾದರೆ ಶಾಸಕರು ಏನು ಕೆಲಸ ಮಾಡಬೇಕು? ಬರೀ ಸ್ವೀಪರ್ ಟ್ರಾನ್ಸ್‌ಫರ್ ಮಾಡಿಸುವುದೇ? ಈ ರೀತಿಯಲ್ಲಾ ಮಾಡುವುದು ಸರಿಯಲ್ಲ, ನಮ್ಮ ಜಿಲ್ಲೆಯಲ್ಲಿ ಉಸ್ತುವಾರಿ ಮಂತ್ರಿಗಳಿದ್ದಾರೆ, ನಾವು ಯಾವುದಾದರೂ ಮಿನಿಸ್ಟರನ್ನು ಕೇಳುವುದಕ್ಕೆ ಹೋದರೆ ಇದು ನಮಗೆ ಬರುವುದಿಲ್ಲ, ನೀವು ಜಿಲ್ಲಾ ಉಸ್ತುವಾರಿ

ಮಂತ್ರಿಗಳನ್ನು ಕೇಳಿ ಎಂದು ಹೇಳುತ್ತಾರೆ. ಅದು ಬಹಳ ಕಷ್ಟವಾಗುತ್ತದೆ. ಸ್ವಾಮಿ ಇನ್‌ಚಾರ್ಜ್ ಮಿನಿಸ್ಟರನ್ನು ಹುಡುಕುವುದೇ ಆಗುವುದಿಲ್ಲ ತಾವು ಒಂದು ಮಾತು ಹೇಳಿದರೆ ಆಗುತ್ತದೆ, ಇಲ್ಲಾ ಇಲ್ಲಾ ಅದನ್ನು ಇನ್‌ಚಾರ್ಜ್ ಮಿನಿಸ್ಟರ್‌ರವರೆ ಮಾಡಬೇಕು.

ಆದ್ದರಿಂದ ನಿಜವಾಗಲೂ ಡಿಸ್ಟ್ರಿಕ್ ಇನ್‌ಚಾರ್ಜ್ ಮಿನಿಸ್ಟರ್ ಎಂಬುದನ್ನು ತೆಗೆಯಲೇಬೇಕು. ಡಿಸ್ಟ್ರಿಕ್ಟ್ ಇನ್‌ಚಾರ್ಜ್ ಮಿನಿಸ್ಟರ್ ಎಂದರೆ ಹೊರಗಡೆ ಡಿಸ್ಟ್ರಿಕ್ಟ್‌ಗೆ ಹೋಗಬೇಕು. ಅದು ಆಗುತ್ತದೆಯೇ? ಇಲ್ಲಾ, ಆದ್ದರಿಂದ ಡಿಸ್ಟ್ರಿಕ್ ಇನ್‌ಚಾರ್ಜ್ ಮಿನಿಸ್ಟರ್ ಇದ್ದರೆ ಖಂಡಿತವಾಗಿಯೂ ತೆಗೆಯಲೇ ಬೇಕು.

ಯಾವುದೋ ಬಗ್ಗೆ ಒಬ್ಬನಿಗೆ ಊಟವಿಲ್ಲ ಎಂಬ ಬಗ್ಗೆ ಇಂಡಸ್ಟ್ರಿ ಮಿನಿಸ್ಟರ್‌ರವರನ್ನು ಕೇಳಿದರೆ ಇಲ್ಲಾ, ಇಲ್ಲಾ, ನಾನು ಇಂಡಸ್ಟ್ರಿ ಮಿನಿಸ್ಟರ್ ಆಗಿರುವುದರಿಂದ ಊಟದ ಬಗ್ಗೆ ಮಾತನಾಡಬಾರದು, ಆ ರೀತಿ ಇರಬಾರದು, ಇಲ್ಲಾ, ಇಲ್ಲಾ ಅದರ ಬಗ್ಗೆ ನೀವೇ ಹೇಳಿ ಸಾರ್. ಮಂತ್ರಿಯಾಗಿದ್ದಾರೋ, ಇಲ್ಲಾ ಒಂದು ಉದಾಹರಣೆಯನ್ನು ಹೇಳುತ್ತೇನೆ.

ಛೇರ್ಮನ್ : ಮಾನ್ಯ ಬಂಗೇರಾರವರೇ ತಾವು ಮಾತನಾಡಿ.

ಶ್ರೀ ಎಂ.ಪಿ.ಪ್ರಕಾಶ್ : ಮಂತ್ರಿ ಎಂದರೆ ಅವರು ಮಂತ್ರಿಯೇ, ಆದರೆ ಆತನು ತನ್ನ ಇಲಾಖೆಗೆ ಮಂತ್ರಿ, ಆತ ಬೇರೆ ಇಲಾಖೆಗಳಲ್ಲಿ ಆದೇಶ ಮಾಡುವುದಕ್ಕೆ ಬರುವುದಿಲ್ಲ, ಆ ಮಂತ್ರಿ, ಆ ತರಹ ಮಾಡುವುದಕ್ಕಾಗುವುದಿಲ್ಲ. ಆಯಾಯ ಇಲಾಖೆಯ ವ್ಯಾಪ್ತಿಯಲ್ಲಿರುವಂತಹ ವಿಚಾರವನ್ನು ಕೂಡ ನಿಯಮಾವಳಿಗಳು ಇವೆ. ಯಾರು ಮಂತ್ರಿ ಮಾಡಬೇಕಾಗುತ್ತದೆ, ಅದು ಮುಖ್ಯಮಂತ್ರಿಗಳ ಒಪ್ಪಿಗೆಯನ್ನು ತೆಗೆದುಕೊಂಡು ಮಾಡುವುದು ಸಹ ಇರುತ್ತದೆ. ಅನೇಕ ಬಾರಿ ಸಚಿವ ಸಂಪುಟದ ಸಭೆಗೆ ಅದನ್ನು ತೆಗೆದುಕೊಂಡು ಒಪ್ಪಿಗೆ ತೆಗೆದುಕೊಂಡು ಮಾಡಬೇಕಾಗುತ್ತದೆ. ಆ ತರಹದಲ್ಲಿ ನಿರ್ಣಯವನ್ನು ಮಾಡುವುದ್ಕಾಗುವುದಿಲ್ಲ.

ಶ್ರೀ ಎಸ್.ರಾಜೇಂದ್ರನ್ : ನಾನು ಏನು ಹೇಳಿದ್ದೇನೆಂದರೆ, ಇನ್‌ಚಾರ್ಜ್ ಮಿನಿಸ್ಟರ್‌ರವರು ಊರಿನಲ್ಲಿಲ್ಲ ಅವರು ಕ್ಯಾಂಪ್‌ಗೆ ಹೋಗಿದ್ದಾರೆ. ಇನ್ನೊಬ್ಬರು ಮಂತ್ರಿ ಇದ್ದಾರೆ, ಅವರ ಹತ್ತಿರ ಹೋಗಿ ಸ್ವಾಮಿ, ಕೆಇಬಿಯವರು ಪೋಲ್ ತೆಗೆದಿದ್ದಾರೆಂದು ಕೇಳಿದರೆ, ಇಲ್ಲಾರಿ ರಾಜೇಂದ್ರನ್‌ರವರೆ, ಅದು ಆಗುವುದಿಲ್ಲ, ಇನ್‌ಚಾರ್ಜ್ ಮಿನಿಸ್ಟರ್, ರೋಡ್ ಮಾಡಬೇಕು ಸ್ವಾಮಿ, ಇನ್‌ಚಾರ್ಜ್ ಮಿನಿಸ್ಟರ್ ಮುಖಾಂತರ ಬಂದು ಹೋಗಿ ರೋಡ್ ಮಂತ್ರಿಗಳು ಕರೆದುಕೊಂಡು ಬರಬೇಕು. ಇದು ಹೇಗೆ? ರೋಡ್ ಮಂತ್ರಿಗಳು ಒಪ್ಪಿಕೊಂಡರೆ ಇನ್‌ಚಾರ್ಜ್ ಮಿನಿಸ್ಟರ್ ಒಪ್ಪಿಕೊಳ್ಳುವುದಿಲ್ಲ, ಇನ್‌ಚಾರ್ಜ್ ಮಂತ್ರಿಗಳು ಹಾಗೂ ರೋಡ್ ಮಂತ್ರಿಗಳು ಒಪ್ಪಿಕೊಂಡರೆ ಎಂ.ಪಿ.ಯವರು ದೇಹಲಿಯಲ್ಲಿದ್ದಾರೋ

ಕೆಲಸ ಮಾಡುವುದಕ್ಕಾಗುವುದಿಲ್ಲ, ಶಾಸಕರು ಸುಮ್ಮನೆ ಕುಳಿತುಕೊಂಡಿರಬೇಕು. ಈ ಶಾಸಕನು ಗೂಬೆ ಏನು ಕೆಲಸ ಮಾಡುವುದಿಲ್ಲವೆಂದು ಜನರು ಹೇಳುತ್ತಾರೆ, ಅದು ಇರಬಾರದು ಎಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಮಂತ್ರಿಗಳು ಮತ್ತು ಮಾಜಿ ಮಂತ್ರಿಗಳ ಜೊತೆಗೆ, ಮಾನ್ಯ ರಾಜೇಂದ್ರನ್‌ರವರು ಮಂತ್ರಿಗಳು ಹಾಗೂ ಎಂ.ಪಿ.ಗಳ ಒತ್ತಡ ಎಂದು ಹೇಳಿದರು. ಬಹುಶಃ ನಿಮಗೆ ಮಾಜಿ ಉಸ್ತುವಾರಿ ಸಚಿವರ ಕಾಟ ಇಲ್ಲವೇನೋ? ಮಾಜಿ ಉಸ್ತುವಾರಿ ಸಚಿವರುಗಳು ಇನ್ನು ಮಾಜಿ ಉಸ್ತುವಾರಿ ಹಾಲಿ ಉಸ್ತುವಾರಿ ಸಚಿವರ ರೀತಿಯಲ್ಲಿಯೇ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಈಗ ಒಟ್ಟು ಎಷ್ಟು ಸರ್ಕಾರಗಳು, ಎಷ್ಟು ಜನ ಎಂದು ನಮಗೆ ಅರ್ಥವಾಗುತ್ತಿಲ್ಲ, ಇವರು ಭಾರಿ ಸಕ್ರಿಯವಾಗಿದ್ದಾರೆ, ಈ ಸಮ್ಮಿಶ್ರ ಸರ್ಕಾರ ಒಂದು ತರಹ ಗೊಂದಲದ ಸರ್ಕಾರ ನಿರ್ಮಾಣವಾಗಿದೆ.

ಛೇರ್ಮನ್ : ಮಾನ್ಯ ಬಂಗೇರಾರವರೇ ತಾವು ಮಾತನಾಡಿ, ತಾವು ಬೇಗನೆ ಮುಗಿಸಿ.

ಶ್ರೀ ಕೆ.ಪ್ರಭಾಕರ ಬಂಗೇರಾ : ಸನ್ಮಾನ್ಯ ಚೇರ್ಮನ್‌ರವರೆ.....

ಶ್ರೀ ಕೆ.ಎಸ್.ಈಶ್ವರಪ್ಪ : ಈ ಸದನದಲ್ಲಿ ಸಿಕ್ಕಿರುವಂತಹ ಆಶ್ವಾಸನೆಗಳಿಗೂ ಕೂಡ ಬೆಲೆ ಇಲ್ಲವೆಂಬ ಬಗ್ಗೆ ರಾಜ್ಯದ ಜನರು ತೀರ್ಮಾನ ಮಾಡುತ್ತಾರೆ. ತುಂಬಾ ನಾನು ಸ್ಪಷ್ಟವಾಗಿ ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಛೇರ್ಮನ್ : ಮಾನ್ಯ ಈಶ್ವರಪ್ಪನವರೆ, ನೀವು ಮಾನ್ಯ ಪ್ರಭಾಕರ ಬಂಗೇರಾರವರ ಹಕ್ಕನ್ನು ಹಾಗೂ ಅವರು ಮಾತನಾಡುವ ಅವಧಿಯನ್ನು ಕಸಿದುಕೊಳ್ಳುತ್ತಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ: ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ, ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ, ಈ ಸದನದಲ್ಲಿ ಕೊಟ್ಟಿರುವಂತಹ ಆಶ್ವಾಸನೆಗಳಿಗೂ ಇಲ್ಲಿ ಬೆಲೆ ಇಲ್ಲವೆಂದರೆ, ವಿಧಾನಸಭೆಗೆ ಬರಬೇಕೋ ಇಷ್ಟವಾ ಬೇಡವೋ ತಾವು ಹೇಳಬೇಕು ಛೇರ್ಮನೆಂದರೆ,

ಶ್ರೀ ಎಸ್.ಎಲ್. ಧರ್ಮೇಗೌಡ : ಮಾನ್ಯ ಛೇರ್ಮನ್‌ರವರೆ, ನಾವೆಲ್ಲರೂ ಸದನಕ್ಕೆ ಹೊಸದಾಗಿ ಬಂದಿರುತ್ತೇವೆ. ಮಾನ್ಯ ವಸತಿ ಸಚಿವರು ಮಾತನಾಡಿದ್ದನ್ನು ನಾವು ಕೇಳಿದ್ದೇವೆ. ಅವರು ಹೇಳಿರುವ ಮಾತು ಸತ್ಯವಾಗಿದೆ. ಈ ಸದನ ಮುಗಿಯುವುದಾಗಿ, ಗೊಂದಲವಾದ ವಾತಾವರಣ ನಿರ್ಮಾಣವಾದಾಗ ಅವರು ಅಧಿವೇಶನದೊಳಗಡೆ ಸರಿ ಮಾಡುತ್ತೇವೆನ್ನುವಂತಹ ಮಾತನ್ನು ಕೊಟ್ಟಿದ್ದಾರೆ.

ಛೇರ್ಮನ್ : ಮಾನ್ಯ ವಸತಿ ಸಚಿವರು ಮಾತನಾಡುತ್ತಿದ್ದಾರೆ.

ಶ್ರೀ ಅಂಜನಮೂರ್ತಿ : ಈ ಸಭೆ ಮುಗಿಯುವುದರೊಳಗಾಗಿ ನಾನು ತಿದ್ದುಪಡಿ ತರುತ್ತೇನೆಂದು ಹೇಳಲಿಲ್ಲ, ಕಾನೂನಿನ ಪ್ರಕಾರ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ತಾವು ಏತಕ್ಕಾಗಿ ಮೈಮೇಲೆ ಹಾಕಿಕೊಳ್ಳುತ್ತಿದ್ದೀರಿ, ಹೇಳಿದ್ದು ತಾವಲ್ಲ ಮಾನ್ಯ ಎಂ.ಪಿ.ಪ್ರಕಾಶ್‌ರವರು ಹೇಳಿದ್ದಾರೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಹಿರಿಯ ಸಚಿವರಾದಂತಹ ಎಂ.ಪಿ.ಪ್ರಕಾಶ್‌ರವರು ಅವರ ಬಗ್ಗೆ ನಮಗೆ ಬಹಳ ಗೌರವವಿದೆ, ಅವರು ಸತ್ಯಕ್ಕೆ ದೂರವಾದ ಮಾತು ಹೇಳಿದ್ದಾರೆಂದು ನಾನು ಅಂದುಕೊಳ್ಳುವುದಿಲ್ಲ, ಎರಡು ದಿವಸದಲ್ಲಿ ಸದನ ಮುಗಿಯುವುದರೊಳಗಾಗಿ ನಾನು ಮಾಡುತ್ತೇವೆಂದು ಹೇಳಿದ್ದಾರೆ. ಇವತ್ತು ಅವರು ಆ ಮಾತನ್ನು ಉಳಿಸಿಕೊಳ್ಳಬೇಕೆಂದು ನಾನು ಧರಣಿ ಮಾಡುತ್ತಿದ್ದೇನೆ. ಅವರು ಆಶ್ರಯ ಸಮಿತಿ ಅಧ್ಯಕ್ಷರಿಗೆ ಕೊಡಬೇಕು. ಶಾಸಕರು ಆಗಲೇಬೇಕು.

ಶ್ರೀ ಎಂ.ಪಿ.ಪ್ರಕಾಶ್ : ಇಡೀ ಸರ್ಕಾರದ ಪರವಾಗಿ ಮಾತನಾಡಬೇಕಾದಾಗ ಬಹಳ ಜವಾಬ್ದಾರಿಯಿಂದ ಮಾತನಾಡುತ್ತೇವೆ. ನಮಗೆಲ್ಲರಿಗೂ ಇರತಕ್ಕಂತಹ ರಕ್ಷಣಾತೀತವಾಗಿ ಎಲ್ಲಾ ಶಾಸಕರು ಕೂಡ ಶಾಸಕರ ಅಧ್ಯಕ್ಷತೆಯಲ್ಲಿ ಈ ವಸತಿ ಸಮಿತಿಗಳು ಇರಬೇಕು, ಆಶ್ರಯ ಸಮಿತಿ ಇರಬೇಕು ಎನ್ನುವುದನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಸಂಪೂರ್ಣವಾದಂತಹ ಜ್ಞಾನಾನುಭೂತಿ ಇದೆ. ಇದರ ಬಗ್ಗೆ ಚರ್ಚೆಯನ್ನು ಮಾಡಿ ನಾವು ಎರಡು ದಿವಸದೊಳಗಾಗಿ ಈ ಬಗ್ಗೆ ತಿದ್ದುಪಡಿ ಮಾಡತಕ್ಕಂತಹ ವಿಚಾರದ ಬಗ್ಗೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಆದರೆ ಇಲ್ಲಿಯವರೆವಿಗೂ ಕೂಡ ಒಂದು ರಾಜಕೀಯ ಒತ್ತಡಗಳು, ಬೇರೆ ಬೇರೆ ಕಾರಣಗಳು ಇದೆ, ಇದರ ಜೊತೆಗೆ ಕೊಡಬೇಕೇ ಕೊಡಬಾರದೇ ತಾತ್ವಿಕ ವಿಚಾರವೂ ಕೂಡ ಇದೆ. ಇವು ಕೂಡ ನಮ್ಮ ದೃಷ್ಟಿಯಲ್ಲಿ ಈ ಸದನವು ಪಂಚಾಯಿತಿಗೆ ಕೊಟ್ಟರುವಂತಹ ಅಧಿಕಾರವನ್ನು ವಾಪಸ್ಸು ತೆಗೆಯಬೇಕಾದರೆ ಅಧಿಕಾರ ವಿಕೇಂದ್ರೀಕರಣದಲ್ಲಿ ನಿಮಗೆ ನಂಬಿಕೆ ಇಲ್ಲವೆಂಬ ಅಪಾದನೆಗಳು ಬರುತ್ತವೆ. ಈ ಎಲ್ಲಾ ಸಂದರ್ಭಗಳಲ್ಲಿ ಕೂಡ ಸಾಧಕಬಾಧಕಗಳನ್ನು ನೋಡಿಕೊಂಡು ಹೇಳುತ್ತೇನೆ, ಇದು ಒಂದನೆ ಭಾಗವಾಯಿತು, ಸನ್ಮಾನ್ಯ ಛೇರ್ಮನ್‌ರವರೆ, ಇದರ ಬಗ್ಗೆ ತಮಗೆ ಗೊತ್ತಿದೆ, ಅವರೆಲ್ಲರೂ ಹಿರಿಯರಾಗಿರುವವರು, ಸದನ ಒಂದು ತಾತ್ವಿಕವಾದಂತಹ ತೀರ್ಮಾನಕ್ಕೆ ಸಚಿವಸಂಪುಟದ ಸಭೆಯಲ್ಲಿ ನಿರ್ಧಾರ ತೆಗೆದುಕೊಂಡು

ಯಾವುದಾದರೂ ಒಂದು ಮಸೂದೆಗೆ ಗೊತ್ತುವಳಿ ತರಬೇಕೆಂದಾಗ ಸದನದಲ್ಲಿಯೇ ತರಬೇಕೆಂದೆ ಏನೂ ಇಲ್ಲ. ಆ ನಿರ್ಣಯವಾಯಿತೆಂದರೆ ಆದ್ಯಾಪನಾ ಮೂಲಕ ತರುವುದಕ್ಕೆ ಆಗುತ್ತದೆ. ನಿರ್ಣಯ ಮಾಡಬೇಕಾಗಿರುವುದು ಸರ್ಕಾರ ಮಾಡಬೇಕಾಗಿರುತ್ತದೆ. ಈ ಎರಡು ದಿವಸಗಳಲ್ಲಿ ಆಗಲಿಲ್ಲ. ಸರ್ಕಾರ ಸಹಮತಕ್ಕೆ ಬಂತು, ಇದು ಒಂದು ನಿರ್ಣಯವಾದರೆ ಆದ್ಯಾಪನಾ ಮೂಲಕ ಮಾಡಿಕೊಂಡು ನಂತರ ಅದನ್ನು ಸಕ್ರಮಗೊಳಿಸುವುದಕ್ಕೆ ಬರುತ್ತದೆ. ಆದ್ದರಿಂದ ಇದು ಎಲ್ಲಾ ಮುಗಿದುಹೋಗಿದೆ ಎಂದು ಅಲ್ಲ, ಸರ್ಕಾರ ಇನ್ನು ನಿರ್ಣಯ ತೆಗೆದುಕೊಂಡಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ : ಇದರಲ್ಲಿ ಎರಡು ವಿಚಾರಗಳಿವೆ, ಅವರು ಇಲ್ಲಿ ಆಶ್ವಾಸನೆಯನ್ನು ಕೊಡುವುದಕ್ಕಿಂತ ಮುಂದೆ ಯೋಜನೆಯನ್ನು ಮಾಡಬೇಕಾಗಿತ್ತು; ಅವರ ಮೇಲೆ ಆಪಾದನೆಯು ಬರುತ್ತದೆಂದು ಈಗ ಅವರು ಮರುಪರಿಶೀಲನೆಯನ್ನು ಮಾಡುತ್ತೇವೆಂದು ಹೇಳುತ್ತಿದ್ದಾರೆ, ಆಶ್ವಾಸನೆಯನ್ನು ಕೊಡುವುದಕ್ಕೆ ಮುಂಚೆಯೇ ಯೋಚನೆ ಮಾಡಬೇಕಾಗಿತ್ತು. ಅಧಿಕಾರ ವಿಕೇಂದ್ರೀಕರಣದ ವಿರುದ್ಧ ಸರ್ಕಾರ ಇದೆ ಎನ್ನುವ ಭಾವನೆ ಬರುತ್ತದೆಂದು ಇವರಿಗೆ ಹೊಸದಾಗಿ ಭಾವನೆ ಉದ್ಭವವಾಯಿತಾ?

ಈ ವಿಷಯ ಹೊಸದಾಗಿ ಸೃಷ್ಟಿಯಾಗಿಲ್ಲ. ಆ ದಿವಸ ಇವರು ಉತ್ತರ ಕೊಡಬೇಕಾದರೆ ವಿಕೇಂದ್ರೀಕರಣದ ವಿರುದ್ಧ ಇದ್ದಾರೆಯೇ ಅಥವಾ ಇಲ್ಲವೇ? ಇದನ್ನೆಲ್ಲಾ ಮರುಪರಿಶೀಲನೆ ಮಾಡಬೇಕು, ಇದನ್ನು ಯೋಚನೆ ಮಾಡುವಂತಹ ಶಕ್ತಿ ಸರ್ಕಾರಕ್ಕೆ ಇಲ್ಲವೇ? ಯೋಚನೆ ಮಾಡುವಂತಹ ಶಕ್ತಿ ಇಟ್ಟುಕೊಂಡು ಆ ದಿವಸ ಉತ್ತರಿಸಬೇಕಾಗಿತ್ತು.

ಶ್ರೀ ಎಂ.ಪಿ.ಪ್ರಕಾಶ್ (ಹೂವಿನ ಹಡಗಲಿ) : ಮಾನ್ಯ ಈಶ್ವರಪ್ಪನವರೇ, ನಾವು ಯಾವುದಾದರೂ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುವಾಗ ಸಂಪೂರ್ಣ ಜವಾಬ್ದಾರಿಯಿಂದ ಮಾಡುತ್ತೇವೆ. ಸದನದಲ್ಲಿ ಕೂಡ ವೈಯಕ್ತಿಕವಾಗಿ ತೆಗೆದುಕೊಳ್ಳುವ ಅಭಿಪ್ರಾಯವೇ ಬೇರೆ, ಸರ್ಕಾರ ಸಾಮೂಹಿಕವಾಗಿ ತೆಗೆದುಕೊಳ್ಳುವ ನಿರ್ಧಾರವೇ ಬೇರೆ. ಆದ್ದರಿಂದಲೇ ಇಂತಹ ವಿಚಾರಗಳ ಪ್ರಸ್ತಾಪಗಳು ಅನೇಕ ಕಡೆ ಆಗಿರುತ್ತವೆ. ನಾನು ವೈಯಕ್ತಿಕವಾಗಿ ಹೇಳಿರುವಂತಹುದೇನೆಂದರೆ, ಬಹಳಷ್ಟು ಜನ ಶಾಸಕರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಸರ್ಕಾರ ಈ ಬಗ್ಗೆ ತೀವ್ರವಾದ ಗಮನವನ್ನು ಕೊಟ್ಟು ಸದನ ಮುಗಿಯುವುದರೊಳಗೆ ಈ ವಿಚಾರದಲ್ಲಿ ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿರುತ್ತೇವೆ ಅಷ್ಟೆ.

ಶ್ರೀ ಕೆ.ಎಸ್.ಈಶ್ವರಪ್ಪ : ಈ ರೀತಿ ಅವರು ಉತ್ತರ ನೀಡಿರಲಿಲ್ಲ, ಕಡತ ತರಿಸಿ ನೋಡಿ, ಈಗ ವಾಟಾಳ್ ನಾಗರಾಜ್ ಅವರು ಧರಣಿ ಕುಳಿತಿದ್ದಾರೆ. ಹಾಗಾಗಿ ಕಡತ

ತರಿಸಿ ತೋರಿಸುವವರೆಗೆ ಸದನವನ್ನು ನಡೆಸಲಿಕ್ಕೆ ಬಿಡುವುದಿಲ್ಲ, ಸದನವನ್ನು ದಯಮಾಡಿ ಮುಂದಕ್ಕೆ ಹಾಕಬೇಕು.

ಶ್ರೀ ಎಂ.ಪಿ.ಪ್ರಕಾಶ್ : ಕಡತ ಇದೆ, ತರಿಸಿ ನೋಡಿ

ಛೇರ್ಮನ್ : ಸರ್ಕಾರದ ಪರವಾಗಿ ಏನು ಹೇಳಿಕೆಯನ್ನು ಕೊಟ್ಟಿದ್ದಾರೆ, ಅದನ್ನು ಕಡತ ತರಿಸಿ ಪರಿಶೀಲನೆ ಮಾಡಿ ನಾಳೆ ನಿಮಗೆ ಅದರ ಬಗ್ಗೆ ತಿಳಿಸುತ್ತೇನೆ. ಈಗ ಪ್ರಭಾಕರ ಬಂಗೇರ ಅವರು ಮಾತನಾಡುವುದನ್ನು ಮುಂದುವರೆಸಬೇಕು.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಈ ಸರ್ಕಾರ ಬಂದು ಹತ್ತು ತಿಂಗಳಾದರೂ ಈ ಯೋಚನೆ ಕಾರ್ಯಗತವಾಗಿಲ್ಲ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಸರ್ಕಾರದಲ್ಲಿ ಆಶ್ರಯ ಯೋಜನೆ ಕಾರ್ಯಗತವಾಗುವ ವಿಚಾರವಿದೆಯೇ? ಬಡವರಿಗೆ ಮನೆಯನ್ನು ಕೊಡುವ ಯೋಚನೆಯಿದೆಯೇ? ಈ ಕಾರ್ಯಕ್ರಮದ ಅನುಷ್ಠಾನವನ್ನು ಮಾಡುವಿರಾ? ನಿಮಗೆ ಆ ಬದ್ಧತೆಯಿದೆಯೇ? ನಿಮಗೆ ಆ ಬಗ್ಗೆ ಕಾಳಜಿ ಇದ್ದಿದ್ದರೆ ಅದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಈಗಾಗಲೇ ಹತ್ತು ತಿಂಗಳನ್ನು ಕಳೆದಿರುವಿರಿ. ಇದುವರೆವಿಗೂ ಕೂಡ ಸಮಿತಿಯನ್ನು ರಚಿಸಲಿಲ್ಲ, ಪಂಚಾಯಿತಿಗಳಿಗೆ ಕೊಡಲಿಲ್ಲ, ತಾವೇ ಹೇಳಿದಂತೆ ಹಿಂದೆಯೂ ಕೂಡ ಫಲಾನುಭವಿಗಳನ್ನು ಗ್ರಾಮಸಭೆಗಳಲ್ಲಿ ಆಯ್ಕೆ ಮಾಡಿ, ಆ ಫಲಾನುಭವಿಗಳನ್ನು ಫಿಲ್ಟರ್ ಮಾಡಿ ಪಂಚಾಯತ್‌ಗಳಲ್ಲಿ ನಿರ್ಣಯ ಮಾಡಿ ಆಶ್ರಯ ಕಮಿಟಿಗೆ ಕಳುಹಿಸುತ್ತಿದ್ದರು. ಆಶ್ರಯ ಕಮಿಟಿಯಲ್ಲಿ ನೀವು ನೀಡಿದ ೩ ಅಥವಾ ೫ ಮನೆಗಳನ್ನು ಪಂಚಾಯತ್‌ನವರು ಹಂಚುವ ಕೆಲಸವನ್ನು ಮಾಡುತ್ತಿದ್ದರು. ಈಗಲೂ ಕೂಡ ಅದೇ ಪ್ರೊಸಿಜರ್ ಅನ್ನು ಅನುಸರಿಸಿದರೆ ಅವರ ಅಧಿಕಾರವನ್ನು ಅವರು ಚಲಾಯಿಸಿದ ಹಾಗೆ ಆಗುತ್ತದೆ, ನಮ್ಮ ಅಧಿಕಾರವನ್ನು ನಾವು ಚಲಾಯಿಸಿದ ಹಾಗೆ ಆಗುತ್ತದೆ. ಇಡೀ ನಿವೇಶನರಹಿತ, ಮನೆರಹಿತ ಜನರಿಗೆ ವಸತಿ ಸೌಕರ್ಯವನ್ನು ಕಲ್ಪಿಸುವಷ್ಟು ಹಣ ಸರ್ಕಾರದಲ್ಲಿಲ್ಲ, ಆದರೆ ನೀವು ಇದುವರೆಗೆ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳದೇ ಇದ್ದರೆ, ಬಡವರಿಗೆ ವಸತಿ ಸೌಕರ್ಯ ಕಲ್ಪಿಸಲು ಅಡಚಣೆ ಮಾಡುವಂತಹ ಯಾವ ರಾಜಕೀಯ ಒತ್ತಡ ನಿಮಗೆ ಇದೆ? ಕಾಂಗ್ರೆಸ್ಸಿನವರು ಬೇಡ ಎನ್ನುತ್ತಾರೆಯೇ? ಅಥವಾ ಜನತಾ ದಳ(ಎಸ್)ದವರು ಬೇಡ ಎನ್ನುತ್ತಾರೆಯೇ? ದಲಿತರಿಗೆ,

ಬಡವರಿಗೆ ಇರುವ ಈ ಯೋಜನೆಗಳನ್ನು ಸಕ್ರಮಗೊಳಿಸಲು ನಿಮ್ಮಲ್ಲಿ ಹಣವಿಲ್ಲವೇ? ರಸ್ತೆಗಳು ಮಾಡಲಿಕ್ಕೆ ನಿಮ್ಮಲ್ಲಿ ಹಣ ಇಲ್ಲ, ಈ ಕಮಿಟಗಳನ್ನು ರಚನೆ ಮಾಡಲಿಕ್ಕೆ ನಿಮಗೆ ಹಣ ಬೇಕೆ?...

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟಕಲ್) : ಸರ್ಕಾರಕ್ಕೆ ಈಗ ಆಶ್ರಯ ಸಮಿತಿಗಳಿಗೆ ಅಧ್ಯಕ್ಷರನ್ನು ನೇಮಿಸಬಾರದೆಂಬ ಅಭಿಪ್ರಾಯವಿಲ್ಲ. ನಮ್ಮ ಕಡೆ ಇರುವ ಶಾಸಕರು ಸಹ ಮೊದಲು ಆಶ್ರಯ ಸಮಿತಿ ಯೋಜನೆ ಹೇಗಿತ್ತೋ ಅದೇ ರೀತಿ ಇರಬೇಕೆಂಬ ಅಭಿಪ್ರಾಯ ಹೊಂದಿದ್ದಾರೆ. ಈಗಾಗಲೇ ನಮ್ಮ ಎಂ.ಪಿ.ಪ್ರಕಾಶ್ ಅವರು ಹೇಳಿದ ಹಾಗೆ ಇದು ಅಮೆಂಡ್ಮೆಂಟ್ ಆಗಿ ಹೋಗಿದೆ ಆ ಅಮೆಂಡ್ಮೆಂಟ್‌ನಲ್ಲಿ ಪಂಚಾಯತ್‌ಗೆ ಈ ಬಗ್ಗೆ ಅಧಿಕಾರವನ್ನು ವಹಿಸಿದ್ದೇವೆ. ಪುನಃ ಅವರಿಂದ ಈ ಅಧಿಕಾರವನ್ನು ಹಿಂಪಡೆಯಲು ಅಮೆಂಡ್ಮೆಂಟ್ ತರಬೇಕು ಇಲ್ಲವೇ ಆರ್ಡಿನನ್ಸ್ ತರಬೇಕು. ಆದ್ದರಿಂದ ಇದನ್ನು ಸಮತೋಲನ ಮಾಡುವ ಬಗ್ಗೆ ಅವರು ಹೇಳಿದರು, ಏನೆಂದರೆ ಶಾಸಕರ ಅಧ್ಯಕ್ಷತೆಯಲ್ಲಿ, ಈ ಸಮಿತಿ ಇರಬೇಕಾದರೆ, ಕನಿಷ್ಠ ಪಕ್ಷ ಪಂಚಾಯತ್‌ನಿಂದ ರೆಕ್ಮೆಂಡೇಷನ್ ತೆಗೆದುಕೊಂಡು ಅಂತಿಮವಾಗಿ ಒಂದು ಪಟ್ಟಿಯನ್ನು ತಯಾರು ಮಾಡಲು ಆಶ್ರಯ ಸಮಿತಿಯ ಶಾಸಕರ ಅಧ್ಯಕ್ಷತೆಯಲ್ಲಿ ನಿರ್ಣಯಿಸುವುದು ಎನ್ನುವ ಒಂದು ಯೋಜನೆಯಿದೆ. ಆದಕಾರಣ ಇದನ್ನು ಪುನರ್ ಪರಿಶೀಲನೆ ದೃಷ್ಟಿಯಿಂದ ನಾವು ಯೋಜನೆಯನ್ನು ಮಾಡುತ್ತಿದ್ದೇವೆಂದು ಅವರು ಹೇಳಿದರು. ಆದರೆ ನಮಗೆ ಕಾಳಜಿಯೇ ಇಲ್ಲ ಅಂತ ನೀವು ಹೇಳುತ್ತಿರುವಿರಿ. ಕಾಳಜಿ ಇಲ್ಲದೇ ಹೋಗಿದ್ದರೆ ನಾವು ಹತ್ತೂವರೆ ಲಕ್ಷ ಮನೆಯನ್ನು ಕಟ್ಟಿಸುತ್ತಿರಲಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ : ನೀವು ಹೇಳುತ್ತಿರುವುದು ಸರಿಯಿದೆ. ಆದರೆ ಇಲ್ಲಿ ಪ್ರಶ್ನೆ ಬಂದಿರುವುದು ನಮಗೆ ಕಾಳಜಿ ಇದೆ ಅಥವಾ ಇಲ್ಲವೆನ್ನುವ ಬಗ್ಗೆ ಅಲ್ಲ. ಅವರು ಸದನ ಮುಗಿಯುವುದರೊಳಗೆ ಈ ಬಗ್ಗೆ ಖಂಡಿತ ಬದಲಾವಣೆ ಮಾಡಿ ಇರುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಪ್ರಶ್ನೆ ಬಂದಿರುವುದೇನೆಂದರೆ, ಜ್ಞಾನೇಂದ್ರ ಅವರು ಹೇಳಿದ ಹಾಗೆ ಈಗಾಗಲೇ ಸರ್ಕಾರ ರಚನೆಯಾಗಿ ಹತ್ತು ತಿಂಗಳಾಯಿತು. ಒಂದು ಸೈಟ್ ಹಂಚಲಿಕ್ಕೆ ನಮ್ಮ ಶಾಸಕರಿಗೆ ಅರ್ಹತೆ ಸಿಕ್ಕಿಲ್ಲ, ಈ ಸೆಷನ್ ಮುಗಿಸಿಕೊಂಡು ಹೋದರೆ ಮತ್ತೆ ಅವರು ನಿಮ್ಮ ಹಣೆಬರಹಕ್ಕೆ ನಾವ್ಯಾಕೆ ನಿಮ್ಮನ್ನು ಗೆಲ್ಲಿಸಬೇಕೆಂದು ಬಡವರು ನಮ್ಮನ್ನು ಪ್ರಶ್ನಿಸುತ್ತಾರೆ. ಆಗ ಅವರಿಗೆ ಉತ್ತರವನ್ನು ಏನು ಕೊಡುವುದು? ನೀವೆ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ನಮ್ಮ ಅಧಿಕಾರವನ್ನು ಪಂಚಾಯತ್‌ಗೆ ನೀಡಿದ್ದೇವೆ. ಹಾಗಾಗಿ ಅವರ ಮುಖಾಂತರ ಕೂಡ ಈ ಕೆಲಸವನ್ನು ಮಾಡಿಸಬಹುದು. ಆದರೆ ಇಲ್ಲಿ ಸದನದ ಎಲ್ಲಾ ಶಾಸಕರ ಅಭಿಪ್ರಾಯ ಕೂಡ ಇದೇ ಆಗಿದೆ. ಆದರೆ ಇಲ್ಲಿ

How to overcome? ಎಂಬ ಪ್ರಶ್ನೆ ಬಂದಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ತಾವು ಹಿರಿಯ ಸದಸ್ಯರಾಗಿದ್ದೀರಿ. ದಯವಿಟ್ಟು ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಅಮೆಂಡ್‌ಮೆಂಟ್ ಆಗಿಹೋಗಿದೆ. ಪುನಃ ವಾಪಸ್ಸು ಹೋದರೆ ಪ್ರಕಾಶ್ ಅವರು ಹೇಳಿದ ಹಾಗೆ ಇವರಿಗೆ ವಿಕೇಂದ್ರೀಕರಣದಲ್ಲಿ ವಿಶ್ವಾಸವಿಲ್ಲ. ಪಂಚಾಯತ್‌ಗಳಿಗೆ ಕೊಟ್ಟಂತಹ ಅಧಿಕಾರವನ್ನು ಇವರು ಹಿಂದೆ ಪಡೆಯುತ್ತಿದ್ದಾರೆ ಎನ್ನುವ ಅಭಿಪ್ರಾಯ ಬರುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಆ ದಿವಸವೇ ಉತ್ತರಿಸಬೇಕಾದರೆ ಅವರು ಈ ಮಾತನ್ನು ಹೇಳಬೇಕಾಗಿತ್ತು. ಇವೆಲ್ಲಾ ಇವತ್ತಿನ ಪ್ರಶ್ನೆ ಅಲ್ಲ. ಹೊಸದಾಗಿ ಈ ರೀತಿ ಹೇಳುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಅಮೆಂಡ್‌ಮೆಂಟ್ ಆಗಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಎಲ್ಲಾ ಶಾಸಕರು ಹೇಳುವುದೇನೆಂದರೆ. ನಾವು ಹಿಂದೆ ಕೂಡ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಗ್ರಾಮ ಸಭೆಗಳಲ್ಲಿ ಇದನ್ನೆಲ್ಲಾ ಪರಿಶೀಲಿಸಿ ಕೊಡುತ್ತಿದ್ದೇವೆ. ಇದರಲ್ಲಿ ಯಾವುದೇ ಅನ್ಯಾಯವಾಗಿಲ್ಲ. ಏನೋ ಒಂದೆರಡು ಕಂಪ್ಲೇಂಟ್‌ಗಳು ಎಲ್ಲಾ ಕಡೆ ಕೂಡ ಇರುತ್ತವೆ. ಅತ್ಯುನ್ನತವಾದ ಭೂಸುಧಾರಣೆ ಕಾಯ್ದೆ ಕೂಡ ನಮ್ಮ ಶಾಸಕರ ಅಧ್ಯಕ್ಷತೆಯಲ್ಲಿ ನಿರ್ಣಯವಾಯಿತು. ನನಗೆ ಅನ್ನಿಸಿದ ಮಟ್ಟಿಗೆ ಭೂಸುಧಾರಣೆ ಕಾಯ್ದೆಗಿಂತಲೂ ಇನ್ನಾವುದೇ ಮಹತ್ವವಾದ ಕಾಯ್ದೆಯಿಲ್ಲ. ದೇಶದ ಯಾವುದೇ ಭಾಗದಲ್ಲಾದರೂ ಜಮೀನು ಬಗ್ಗೆ ಆಸ್ತಿ ಬಗ್ಗೆ ಜಗಳ. ವಾದವಿವಾದಗಳು ನಡೆಯುತ್ತವೆ. ಜಮೀನುಗಳ ಮಾಲೀಕತ್ವ ಬಗ್ಗೆ ಕೂಡ ಜಗಳ ನಡೆಯುತ್ತವೆ. Soverignity vests with the land ಅಂಥದ್ದನ್ನೇ ಅಂದರೆ ಭೂಸುಧಾರಣೆ ಕಾಯ್ದೆಯನ್ನು ನಮ್ಮ ಶಾಸಕರಿಗೆ ಕೊಟ್ಟು ಇಂಪ್ಲಿಮೆಂಟ್ ಮಾಡಿದಂತಹ ರಾಜ್ಯವಿದು. ಇದರ ಬಗ್ಗೆ ನಂಬಿಕೆಯಿಲ್ಲ ಎನ್ನುವ ಪ್ರಶ್ನೆಯಿಲ್ಲ. ಆದರೆ ಹೇಗೆ How to overcome? ಎಂಬ ಪ್ರಶ್ನೆಯಿದೆ. ಹಾಗಾಗಿ ಈ ಕುರಿತು ನಾವು ಮತ್ತೊಮ್ಮೆ ಪರಿಶೀಲನೆ ಮಾಡಿ ಪುನಃ ಇದನ್ನು ಸಂಪುಟದಲ್ಲಿ ಇಟ್ಟು ಚರ್ಚೆ ಮಾಡಿ. ಯಾವುದೋ ಒಂದು ರೀತಿಯಲ್ಲಿ ಶಾಸಕರನ್ನು ಇದರಲ್ಲಿ ಇನ್‌ವಾಲ್ವ್ ಮಾಡಬೇಕೆಂದು ಎಲ್ಲರ ಅನಿಸಿಕೆ ಇದೆ. ಇದರ ಬಗ್ಗೆ ಪುನಃ ಪರಿಶೀಲನೆ ಕೂಡ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇದರ ಬಗ್ಗೆ ಹೊಸದಾಗಿ ಚರ್ಚೆ ಮಾಡಲಿಕ್ಕೆ ಏನು ಉಳಿದಿಲ್ಲ. ಇದರ ಬಗ್ಗೆ ಸರ್ಕಾರಕ್ಕೆ ನಾವು ಸ್ಪಷ್ಟವಾಗಿ ಹೇಳುತ್ತೇವೆ.

ಚೇರ್‌ಮನ್ : ಅದರ ಬಗ್ಗೆ ಪುನರ್‌ಪರಿಶೀಲನೆ ಮಾಡಿ ಹೇಳುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಹಿಂದೆ ಇದೇ ರೀತಿ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಈಗ ಯಾವುದೇ ಕಾರಣಕ್ಕೂ ಇದನ್ನು ಬಿಡುವುದಿಲ್ಲ. ಹೀಗಾದರೆ ನೀವು ರಾಜ್ಯದ ಬಡವರಿಗೆ ಒಂದು ಸೈಟ್ ಕೊಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಸದನದಲ್ಲಿ ಮುಗಿಸುತ್ತೇವೆಂದು ಆಶ್ವಾಸನೆಯನ್ನು ಅವರು ಕೊಟ್ಟಿದ್ದರು. ದಯವಿಟ್ಟು ಕಡತ ತರಿಸಿ ನೋಡಿ.

ಶ್ರೀ ಎಂ.ಪಿ.ಪ್ರಕಾಶ್ : ಅಧ್ಯಕ್ಷರೆ. ತಾವು ಈಗಾಗಲೇ ಹೇಳಿದ್ದೀರಿ. ಕಡತ ತರಿಸಿ ಪರಾಂಬರಿಸಿ. ಒಬ್ಬ ವ್ಯಕ್ತಿ ಇನ್ನೊಬ್ಬರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆಂದರೆ. ನಾನು ಸಹ ಅಷ್ಟೇ ಸ್ಪಷ್ಟವಾಗಿ ಹೇಳಿದ್ದೇನೆ. ಇಲ್ಲಿ ಅಸ್ಪಷ್ಟತೆಗೆ ಅವಕಾಶವಿಲ್ಲ. ಅವರು ಕಡತ ತರಿಸಿ ಪರಿಶೀಲನೆ ಮಾಡಿಸಿ ಅಂತ ಹೇಳುತ್ತಿದ್ದಾರೆ. ಕಡತವನ್ನು ತರಿಸಿ. They cannot hold the house to ransom.

ಶ್ರೀ ಕೆ.ಎಸ್. ಈಶ್ವರಪ್ಪ ; ಸದನವನ್ನು ಕಡತ ತರಿಸುವವರೆಗೆ ದಯವಿಟ್ಟು ಮುಂದಕ್ಕೆ ಹಾಕಿ. ಇದು ರಾಜ್ಯದ ಬಡವರ ಪ್ರಶ್ನೆ. ಈ ಸರ್ಕಾರ ಈಗ ಒಂದು ಉತ್ತರ ಹೇಳಿ. ಪುನಃ ನಾಳೆ ಬೆಳಿಗ್ಗೆ ಮತ್ತೊಂದು ಉತ್ತರ ಕೊಡುತ್ತದೆ. ಆದರೆ ನಾವು ಇದಕ್ಕೆ ಅವಕಾಶವನ್ನು ಕೊಡುವುದಿಲ್ಲ.

ಛೇರ್‌ಮನ್ : ದಾಖಲೆಗಳನ್ನು ತರಿಸಿ ನೋಡಿ. ಈ ಅಧಿವೇಶನದಲ್ಲಿ ತಿದ್ದುಪಡಿ ತಂದು ನಾವು ಮಾಡುತ್ತೇನೆಂಬ ಮಾತನ್ನು ಹೇಳಿದ್ದರೆ ಸರ್ಕಾರ ಅದಕ್ಕೆ ಬದ್ದವಾಗಬೇಕಾಗುತ್ತದೆ. ಅದಕ್ಕೆ ಕಡತವನ್ನು ತರಿಸಿ ನೋಡೋಣ. ಅಲ್ಲಿಯವರೆಗೂ ಕಾರ್ಯಕಲಾಪವನ್ನು ನಡೆಸಬೇಕಾಗುತ್ತದೆ. ಇದಕ್ಕೆ ಅಡಚಣೆ ಮಾಡುವುದು ಬೇಡ. ಶ್ರೀ ಪ್ರಭಾಕರ್ ಬಂಗೇರ ಅವರು ಮಾತನ್ನು ಮುಂದುವರೆಸಬೇಕು. ದಾಖಲೆಯನ್ನು ತರಿಸಿ ನೋಡಿ ನಾಳೆ ನಮಗೆ ಈ ಬಗ್ಗೆ ಸ್ಪಷ್ಟನೆ ಮಾಡುತ್ತೇವೆ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ದಯವಿಟ್ಟು ಬೇಡ. ಸದನವನ್ನು ಮುಂದಕ್ಕೆ ಹಾಕಿ.

ಛೇರಮನ್ : ನಾಳೆ ನಮಗೆ ತಿಳಿಸುತ್ತೇವೆಂದು ಹೇಳುತ್ತಿದ್ದೇವೆ. ಈಗ

ವೇಳೆಯಾಗುತ್ತಾ ಬಂದಿದೆ. ಬಂಗೇರಿ ಅವರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ರಾಜ್ಯದ ಮಹತ್ವವಾದ ವಿಷಯದ ಬಗ್ಗೆ ಚರ್ಚೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ಯಾವುದೇ ಕಾರಣಕ್ಕೂ ಬಡವರನ್ನು ಬಡಲಿಕ್ಕೆ ನಾವು ಸಿದ್ದರಿಲ್ಲ. ವಿರೋಧಪಕ್ಷದವರಾಗಿ ರಾಜ್ಯದ ಬಡವರ ಪರವಾಗಿ ಹೋರಾಟ ನಡೆಸುವುದು ನಮ್ಮ ಕರ್ತವ್ಯವಾಗಿದೆ. ಹೋರಾಟ ನಡೆಸಿದ ಸಂದರ್ಭದಲ್ಲಿ ರಾಜ್ಯ ಸರ್ಕಾರ ನಮಗೆ ತುಂಬಾ ಸ್ಪಷ್ಟವಾಗಿ ಆಶ್ವಾಸನೆಯನ್ನು ಕೊಟ್ಟಿದೆ. ಏನೆಂದರೆ ಈ ಸದನ ಮುಗಿಯುವದರೊಳಗಾಗಿ ಈ ಬಿಲ್ ಅನ್ನು ಮಂಡನೆ ಮಾಡಿ ನಮಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿರುತ್ತಾರೆ. ದಯವಿಟ್ಟು ಈ ಬಗ್ಗೆ ಕಡತವನ್ನು ತರಿಸಿ ಸ್ಪಷ್ಟಪಡಿಸಬೇಕು. ಅಲ್ಲಿಯವರೆಗೂ ನಾವು ಬಡವರಿಗೆ ದ್ರೋಹ ಮಾಡಲಿಕ್ಕೆ ಈ ಸರ್ಕಾರಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಬಡವರ ಬಗ್ಗೆ ಹೋರಾಟ ಅಲ್ಲ. ಅಧಿಕಾರಕ್ಕಾಗಿ ಹೋರಾಟ ಎನಿಸುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಏನು ಬೇಕಾದರೂ ತಿಳಿದುಕೊಳ್ಳಬಹುದು. ನೀವು ಈ ರೀತಿ ಹೇಳಿ ಕಾಂಗ್ರೆಸ್‌ನವರು ಇವತ್ತು ಈ ಸ್ಥಿತಿಗೆ ಬಂದಿದೆ.

ಛೇರಮನ್ : ಕಡತವನ್ನು ಪರಿಶೀಲನೆ ಮಾಡಿ ನಾಳೆ ನಮಗೆ ಸ್ಪಷ್ಟವಾಗಿ ತಿಳಿಸುತ್ತೇವೆಂದು ಹೇಳಿದ್ದೇವೆ. ನೀವು ಸಲಹೆಯನ್ನು ಕೊಡಿ. ಅದು ಸ್ವೀಕರಿಸಲಿಕ್ಕೆ ಅರ್ಹ ಅನ್ನಿಸಿದರೆ ಅದನ್ನು ನಾವು ಅಂಗೀಕರಿಸುತ್ತೇವೆ. ಆದರೆ ನೀವು ನಮಗೆ ಹೀಗೆ ಮಾಡಿ. ಸದನವನ್ನು ಮುಂದಕ್ಕೆ ಹಾಕಿ ಎಂದು ಡೈರಕ್ಷನ್ ಕೊಡಬೇಡಿ. ಅದು ಉಚಿತವಲ್ಲ. ನಾನು ಈಗಾಗಲೇ ತಮಗೆ ಸ್ಪಷ್ಟಪಡಿಸಿದ್ದೇನೆ. ನಾಳೆ ಈ ಬಗ್ಗೆ ನಮಗೆ ಸ್ಪಷ್ಟವಾದ ತೀರ್ಮಾನವನ್ನು ಕೊಡುತ್ತೇವೆಂದು. ಆದರೂ ನೀವು ಸಭೆ ಮುಂದಕ್ಕೆ ಹಾಕಿ. ಸದನ ನಡೆಸುವುದೇ ಬೇಡವೆನ್ನುವುದು ಸರಿಯಲ್ಲ. ಬಂಗೇರರವರು ಮಾತನಾಡುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸರ್ಕಾರ ಈ ಸದನವನ್ನು ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸುವುದು ತನ್ನ ಕರ್ತವ್ಯವಾಗಿದೆ. ಅದನ್ನು ನೆರವೇರಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ನಾವು ನಿಮಗೆ ಮನವಿ ಮಾಡುವುದು. ಖಂಡಿತ ನಮಗೆ ಒತ್ತಾಯ ಮಾಡುವುದಾಗಲೀ ಅಥವಾ ನಿಮ್ಮ ಮೇಲೆ ಆಗ್ರಹ ಮಾಡುವುದಾಗಲೀ ಇಲ್ಲ. ನಾವು

ನಿಮಗೆ ಮನವಿ ಮಾಡುವುದು ಏನು? ನಾವು ಇವತ್ತು ಮಧ್ಯರಾತ್ರಿವರೆಗೆ ಕೂರುವುದಕ್ಕೆ ತಯಾರಿದ್ದೇವೆ. ದಯವಿಟ್ಟು ಅರ್ಧ ಗಂಟೆ ಸದನವನ್ನು ಮುಂದಕ್ಕೆ ಹಾಕಿ. ತಾವು ಕಡತ ತರಿಸಿ ನೋಡಿ. ಸರ್ಕಾರ ಹೇಳಿರುವ ಮಾತು ಸತ್ಯ ಆದರೆ. ನಾವು ಅದೇ ಪ್ರಕಾರ ನಡೆದುಕೊಳ್ಳುತ್ತೇವೆ. ನಾನು ನಿಮ್ಮ ಮೇಲೆ ಒತ್ತಾಯ ಮಾಡುವುದಿಲ್ಲ. ಈ ಸರ್ಕಾರ ಬಡವರಿಗೆ ಅನ್ಯಾಯ ಮಾಡುತ್ತಿರುವುದನ್ನು ಯಾವುದೇ ಕಾರಣಕ್ಕೂ ವಿರೋಧ ಪಕ್ಷದವರು ಬಿಡುವುದಕ್ಕೆ ತಯಾರಿಲ್ಲ. ೩೧ನೇ ತಾರೀಖಿನೊಳಗೆ ಇದಕ್ಕೆ ತಿದ್ದುಪಡಿ ತರಬೇಕು. ೧ನೇ ತಾರೀಖಿನಿಂದ ಆ ಬಡವರಿಗೆ ಸೈಟುಗಳನ್ನು ಕೊಡಬೇಕು. ೧೦ ತಿಂಗಳಾಯಿತು. ಒಂದು ಸೈಟ್ ಕೊಡುವ ಯೋಗ್ಯತೆ ನಮಗೆ ಆಗಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ. ಇಷ್ಟು ಉದ್ವೇಗದಿಂದ ಹಿರಿಯರಾದಂಥವರು ಮಾತನಾಡತಕ್ಕ ಅಗತ್ಯ ಇಲ್ಲಿ, ಇಲ್ಲಿ ಪ್ರಶ್ನೆ ಬಂದಿರತಕ್ಕಂಥಾದ್ದು. ಈ ಆಶ್ವಾಸನೆಯನ್ನು ಕೊಟ್ಟಿದ್ದೇನೆಂದು ಅವರು ಹೇಳುತ್ತಾರೆ. ತಾವು ಕಡತ ನೋಡಿ. ಪರಾಂಬರಿಸಿ. ತಾವು ಕಡತ ತರಿಸಿ ನೋಡಿ. ಅಲ್ಲೆ ಏನು ಉತ್ತರ ಕೊಟ್ಟಿದ್ದೇವೆ ಎನ್ನತಕ್ಕಂಥದ್ದಾನ್ನು ತಾವು ಪರಾಂಬರಿಸಿ. ಇಲ್ಲಿ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಬೇಕಾದರೆ. ಸಚಿವ ಸಂಪುಟದಲ್ಲಿ ನಿರ್ಧಾರ ಆಗಬೇಕಾಗುತ್ತದೆ. ಆಮೇಲೆ ಬಡವರ ವಿರೋಧಿ. ದ್ರೋಹಿ ಎನ್ನತಕ್ಕಂಥ ಮಾತೇನಿದೆ. ಈ ಸರ್ಕಾರ ಬಡವರ ಪರವಾಗಿ ನಿಂತಿರತಕ್ಕ ಸರ್ಕಾರವೇ ಆಗಿದೆ. ಬಹುಮತವನ್ನು ನಮ್ಮ ಎರಡೂ ಪಕ್ಷದ ಸಮ್ಮಿಶ್ರ ಸರ್ಕಾರಕ್ಕೆ ಜನ ಕೊಟ್ಟಿದ್ದಾರೆ. ಸಮಿತಿಗಳ ರಚನೆಯಾಗಿಲ್ಲವೆಂಬುದೇನಿದೆ. ಪಂಚಾಯ್ತಿಗಳಿಗೆ ೪೦ ಮನೆಗಳನ್ನು ವಿತರಣೆ ಮಾಡಿ ವಸತಿ ಇಲಾಖೆಯವರು ಕೊಟ್ಟಿದ್ದಾರೆ. ಪಂಚಾಯ್ತಿಗಳವರು. ಅವರಿಗೆ ಬೇಕಾದಂತ ಕಡೆಗಳಿಗೆ. ಕ್ರಮ ಕೈಗೊಂಡಿದ್ದಾರೆ. ಇಲ್ಲಿ ಪ್ರಶ್ನೆ ಬಂದಿರತಕ್ಕಂಥಾದ್ದು ಏನು? ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿರತಕ್ಕಂಥ ಹಿಂದಿನ ಪರಂಪರೆಯ ಪ್ರಕಾರ. ಅವರ ಅಧ್ಯಕ್ಷತೆಯಲ್ಲಿ ಇರಬೇಕು ಎಂಬುದಕ್ಕೆ ನಮ್ಮೆಲ್ಲರ ಸಹಮತವೂ ಇದೆ. ಆದರೆ. ವ್ಯಕ್ತಿಗತವಾದಂಥ ಸಹಮತ ಬೇರೆ. ಅದೊಂದು ನಮ್ಮ ಸಮಷ್ಟಿ ನಿರ್ಧಾರ ಆಗತ್ತಕ್ಕಂಥಾದ್ದು ಬೇರೆ. ಅದಕ್ಕೆ ಬೇರೆ ಇನ್ನೊಂದು ಮುಖ ಕೂಡ ಇರುತ್ತದೆ. ಅಧಿಕಾರ ವಿಕೇಂದ್ರೀಕರಣದಲ್ಲಿ ನೀವು ಹಸ್ತಕ್ಷೇಪ ಮಾಡಬಾರದು ಎಂದು. ಬಹಳ ಕಡೆಗೆ ಎನಾಗಿದೆ ಎಂದರೆ. ಅಧಿಕಾರದ ವಿಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ ನಾವು ಬಾಯಿಮಾತು ಮಾತನಾಡುತ್ತೇವೆ. ಆದರೆ. ಅದನ್ನು ರಾಜಕೀಯವಾಗಿ ಹಸ್ತಾಂತರ ಮಾಡುವಾಗ ನಮ್ಮದೆ ಆಗಿರತಕ್ಕಂಥ ಸ್ವಾರ್ಥವನ್ನೂ ಯೋಚನೆ ಮಾಡುತ್ತಿರುತ್ತೇವೆ. ಈ ಕಾರಣಕ್ಕಾಗಿಯೇ ರಾಜಕೀಯ ನಿರ್ಧಾರ ತೆಗೆದುಕೊಳ್ಳಬೇಕಾದಂಥಾದ್ದು ಸಚಿವ ಸಂಪುಟದ ಸಭೆ. ತಾವು ಕೂಡ ಹೇಳಿದ್ದೀರಿ. ಅದನ್ನು ಪರಾಂಭರಿಸಿರಿ. ಅಲ್ಲಿಯವರೆಗೆ

ನೀವು ಮಾತನಾಡಬಾರದು. ಅರ್ಧ ಗಂಟೆಯೊಳಗಾಗಿ ಉತ್ತರ ಕೊಡಬೇಕು ಎಂದರೆ. ಆ ಪ್ರಶ್ನೆ ಉದ್ಭವವಾಗುವುದಿಲ್ಲ. ತಮಗೆ ಯಾವಾಗ ಅನುಕೂಲವಾಗುತ್ತದೋ ಆಗ ತಾವು ನೋಡಿ. ಆದರೆ. ನಾನು ಇನ್ನೊಂದು ಸಲಹೆ ನೀಡಿದೆ. ಮಾನ್ಯ ಹಿರಿಯ ಸಚಿವರು ಕೂಡ ಹೇಳಿದರು. ಈ ವಿಚಾರಗಳ ಬಗ್ಗೆ ನಮ್ಮ ಪಕ್ಷದಲ್ಲಿರತಕ್ಕಂಥವರು. ಬೇರೆ ಪಕ್ಷದಲ್ಲಿರತಕ್ಕಂಥವರು. ಸಮ್ಮಿಶ್ರ ಸರ್ಕಾರದಲ್ಲಿರತಕ್ಕ ಎಲ್ಲಾ ಶಾಸಕರುಗಳಿಗೂ ಕೂಡ ಈ ಆಶ್ರಯ ಸಮಿತಿಯ ಅಧ್ಯಕ್ಷತೆಯನ್ನು ಕೊಡಬೇಕೆನ್ನುವ ವಿಚಾರದಲ್ಲಿ ಒಂದು ಅಭಿಪ್ರಾಯ road consensus ಬಂದಿದೆ. ಈ ದೃಷ್ಟಿಕೋನ ಇಟ್ಟುಕೊಂಡು ಸರ್ಕಾರ ಸಹಾನುಭೂತಿಯಿಂದ ಇದನ್ನು ಚರ್ಚೆ ಮಾಡುತ್ತದೆ ಮತ್ತು ನಿರ್ಧಾರ ತೆಗೆದುಕೊಳ್ಳುತ್ತದೆ. ಇಲ್ಲಿ ಎರಡು ದಿವಸದೊಳಗಾಗಿ ನೀವು ತಿದ್ದುಪಡಿಯನ್ನು ತರದಿದ್ದರೆ ಹೇಗೆ ಎಂದು ಕೇಳುತ್ತಿದ್ದೀರಿ. ನಾವು ಈ ನಿರ್ವಹಣೆಯನ್ನು ಮಾಡಲಿಕ್ಕೆ ಸಾಧ್ಯವಿಲ್ಲವೆಂಬುದು ಏನು ಇಲ್ಲ. ಅದಕ್ಕೆ ಅವಕಾಶ ಇದೆ. ಅದೇ ಅಧ್ಯಾದೇಶದಿಂದ ಮಾಡಲಿಕ್ಕೆ ಬರುತ್ತದೆ. ಮಾನ್ಯ ಜ್ಞಾನೇಂದ್ರರವರು ಮಾತನಾಡಿದರು. ಅವರು ಜಿಲ್ಲಾ ಪಂಚಾಯ್ತಿ ಸದಸ್ಯರಾಗಿದ್ದರು. ಜಿಲ್ಲಾ ಪಂಚಾಯ್ತಿ ಸದಸ್ಯರಾಗಿ ಕೆಲಸ ಮಾಡಿದಂತ ಕಾರಣಕ್ಕಾಗಿಯೇ ಆ ಇಡೀ ತೀರ್ಥಹಳ್ಳಿ ತಾಲ್ಲೂಕಿನಲ್ಲಿ. ಅವರ ಮುಖಂಡತ್ವದಲ್ಲಿ ಮೂರನೇ ಸಲ ಗೆದ್ದು ಬರಲಿಕ್ಕೆ ಸಾಧ್ಯವಾಗಿದೆ. ಅವರು ರಿವ್ಯೂ ಮೀಟಿಂಗ್‌ಗಳಿಗೆ ಹೋದಾಗಲೆಲ್ಲ ಏನು ಪ್ರತಿಪಾದನೆ ಮಾಡುತ್ತಿದ್ದರು ಎಂಬುದು ನನಗೆ ವೈಯಕ್ತಿಕವಾಗಿಯೂ ಗೊತ್ತಿದೆ. ಕುಡಿಯುವ ನೀರಿನ ವಿಚಾರದಲ್ಲಿ ಈಗಿರತಕ್ಕಂಥಾದ್ದರಲ್ಲಿ ಮಾತನಾಡಿದಾಗ ತೀರ್ಥಹಳ್ಳಿಯಲ್ಲಿ ಯಾವುದೋ ಕಾಲದಲ್ಲಿ ಗ್ರಾಮ ಪಂಚಾಯ್ತಿಗಳು ನಿರ್ವಹಣೆ ಮಾಡತಕ್ಕ ಶಕ್ತಿಯನ್ನು ಅವರು ತೋರಿಸಿದ್ದಾರೆ. ನಾವೀಗ ಆಶ್ರಯ. ಬಗರ್ ಹುಕುಂ ಮೊದಲಾದವುಗಳನ್ನು ಮಾಡುವುದಕ್ಕಾಗಿಲ್ಲ ಎಂಬುದೇನಿದೆ. ಇದನ್ನು ಏಪ್ರಿಲ್ ತಿಂಗಳಲ್ಲಿ ಮಾಡುತ್ತೇವೆಂದು ಹೇಳಿದ್ದೇನೆ. ವಿಳಂಬ ಆಗಿದೆ. ಯಾವುದಕ್ಕೆ ಲ್ಯಾಂಡ್ ಟ್ರಿಬ್ಯುನಲ್ ವಿಚಾರದಲ್ಲಿ ಮತ್ತು ಅದೇ ರೀತಿಯಾಗಿರತಕ್ಕ ಆರಾಧನಾ ಸಮಿತಿ ಹಾಗೂ ಅಲ್ಲಿರತಕ್ಕ ನಮ್ಮ ಟ್ರಿಬ್ಯುನಲ್ ಈ ಮೂರು ವಿಚಾರದಲ್ಲಿ ವಿಳಂಬ ಆಗಿದೆ. ಈ ವಿಳಂಬಕ್ಕೆ ನಾನು ಕ್ಷಮೆ ಕೂಡ ಕೇಳಿದ್ದೇನೆ. ಏಪ್ರಿಲ್ ತಿಂಗಳಲ್ಲಿ ನಾನು ಅದನ್ನು ಖಂಡಿತವಾಗಿಯೂ ಮಾಡಿಯೇ ತೀರುತ್ತೇನೆ ಎಂಬ ಮಾತನ್ನೂ ಈ ಸದನದಲ್ಲಿ ಕೊಟ್ಟಿದ್ದೇನೆ. ಆಶ್ರಯ ಮನೆ ವಿಚಾರದಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟಂಥಾದ್ದು ಅಲ್ಲ. ಆದರೆ. ಉತ್ತರ ಕೊಡತಕ್ಕ ಸಂದರ್ಭದಲ್ಲಿ ತಾವು ಕೇಳಿದಿರಿ. ನಾನು ಇಡೀ ಸದನದಲ್ಲಿರತಕ್ಕ ಸದಸ್ಯರ ಅಭಿಪ್ರಾಯವನ್ನು ವ್ಯಕ್ತಮಾಡಿದೆ. ನೀವು ಸ್ಪಷ್ಟವಾಗಿ ಹೇಳಿದ್ದೀರಿ. ಅರ್ಧ ಗಂಟೆಯೊಳಗೆ ಉತ್ತರ ಕೊಡಿ ಎಂದರೆ. ಯಾರೂ ಅರ್ಧ ಗಂಟೆಯಲ್ಲಿ ಉತ್ತರ ಕೊಡುವುದಕ್ಕಾಗುವುದಿಲ್ಲ. ಮಾಜಿ ಮಂತ್ರಿಗಳ ಪ್ರಭಾವ ಇದೆ ಎಂಬ ಮಾತನ್ನು ನೀವು ಹೇಳಿದಿರಿ. ಮಾಜಿ ಮಂತ್ರಿಗಳದೂ ಇರುತ್ತದೆ. ಸೋತಂಥ ಮಂತ್ರಿಗಳದೂ

ಇರುತ್ತದೆ. ಮಾಜಿ ಪ್ರಧಾನ ಮಂತ್ರಿಗಳದೂ ಇರುತ್ತದೆ. ಮಾಜಿ ಗೃಹ ಮಂತ್ರಿಗಳದೂ ಕೂಡ ಇರುತ್ತದೆ. ಈ ದೇಶದಲ್ಲಿ ಯಾರೂ ಪ್ರಭಾವಯುತವಾದಂಥ ನಾಯಕ ಇರುತ್ತಾನೆ. ಅವರು ಎಲ್ಲಾ ವಿಚಾರದಲ್ಲಿಯೂ ಕೂಡ ಪ್ರವೇಶ ಆಗುತ್ತಾನೆ. ಆದ್ದರಿಂದ ಇಲ್ಲಿ ವ್ಯಂಗವಾಗಿ ಮಾತನಾಡಬೇಕಾದ್ದು ಇಲ್ಲ. ಅದು ನಿಮ್ಮ ವೈಯಕ್ತಿಕವಾಗಿರತಕ್ಕಂಥ ಒಂದು ಅನುಭವ ಆಗಿರಬಹುದು. ಆದರೆ. ಇಲ್ಲಿ ಪ್ರಶ್ನೆ ಬಂದಿರತಕ್ಕಂಥಾದ್ದು. ಇದನ್ನು ಇಷ್ಟಕ್ಕೆ ಸೀಮಿತ ಮಾಡಿಕೊಳ್ಳಿ. ತಾವು ದಯಮಾಡಿ ಇದನ್ನು ವಿಳಂಬರಿಸಬೇಕಾದ ಅಗತ್ಯ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ : ಒಟ್ಟಾರೆ ಈ ಸರ್ಕಾರಕ್ಕೆ ಯಾವುದೇ ಕಮಿಟಿ ಮಾಡಲಿಕ್ಕೆ ಆಗುತ್ತಾ ಇಲ್ಲ.

ಶ್ರೀ ಗೋವಿಂದ ಕಾರಜೋಳ : ತಾವು ಕಡತ ತರಿಸಿ. ಪರಿಶೀಲನೆ ಮಾಡಿ. ಅಲ್ಲಿಯವರೆಗೆ ೧೫ ನಿಮಿಷ ಸದನವನ್ನು ಮುಂದಕ್ಕೆ ಹಾಕಿ.

ಛೇರ್ಮನ್ : ಅಧಿವೇಶನ ಇವತ್ತೇ ಮುಗಿಯುವುದಾಗಿದ್ದರೆ. ಈಗಲೇ ಮುಂದಕ್ಕೆ ಹಾಕಿ ಪರಿಶೀಲನೆ ಮಾಡಬಹುದಾಗಿತ್ತು. ಅಧಿವೇಶನ ಇನ್ನೂ ನಾಲ್ಕು ದಿನ ನಡೆಯುವುದರಿಂದ. ಈಗಾಗಲೇ ನಾನು ಹೇಳಿದ್ದೇನೆ. ದಾಖಲೆ ತರಿಸಿ ನೋಡಿ ಸರ್ಕಾರ ಏನು ಹೇಳಿದೆ ಎಂಬುದನ್ನು ನಾಳೆ ತಿಳಿಸುತ್ತೇನೆಂದು ಹೇಳಿದ್ದೇನೆ. ದಯಮಾಡಿ. ತಾವೆಲ್ಲಾ ಸಹಕರಿಸಬೇಕು. ಪ್ರಭಾಕರ ಬಂಗೇರರವರು ತಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಗೋವಿಂದ ಕಾರಜೋಳ ; ದಯವಿಟ್ಟು. ೧೫ ನಿಮಿಷ ಸದನವನ್ನು ಮುಂದೆ ಹಾಕಿ.

ಛೇರ್ಮನ್ : ಇನ್ನೂ ನಾಲ್ಕು ದಿವಸಗಳ ಕಾಲ ಅಧಿವೇಶನ ನಡೆಯುವುದರಿಂದ. ದಾಖಲೆ ತರಿಸಿ ನೋಡಿ. ನಾಳೆಯೇ ಅದರ ಬಗ್ಗೆ ತಿಳಿಸುವುದಕ್ಕಾಗುತ್ತದೆ.

ಶ್ರೀ ಎಸ್ ರಾಜೇಂದ್ರನ್ :- ತಾವು ರೆಕಾರ್ಡ್ ತರಿಸಿ ನೋಡಿ. ಅರ್ಧ ಗಂಟೆ ಕಾಲ ಸದನವನ್ನು ಮುಂದಕ್ಕೆ ಹಾಕಿ.

-ಗೊಂದಲ-

ಛೇರ್ಮನ್ :- ದಯವಿಟ್ಟು ಸಹಕರಿಸಬೇಕು. ಹೀಗೆ ಮಾಡಬೇಕೆಂದು ತಿಳಿಸುತ್ತಾ ಹೋದರೆ. ಕಾರ್ಯಕಲಾಪಗಳನ್ನು ನಡೆಸುವುದು ಕಷ್ಟವಾಗುತ್ತದೆ. ಪ್ರಭಾಕರ ಬಂಗೇರ ಅವರು ಮುಂದುವರೆಸಿ..... ಅವರು ಇನ್ನೇನು ಮುಗಿಸುವ ಹಂತಕ್ಕೆ ಬಂದಿದ್ದಾರೆ. ಎರಡು ನಿಮಿಷದಲ್ಲಿ ಮುಗಿಸುತ್ತಾರೆ. ಅವರು ನಿಮ್ಮ ಸಹ ಸದಸ್ಯರು. ಅವರಿಗೇ....

ಶ್ರೀ ಅರಗ ಜ್ಞಾನೇಂದ್ರ :- ಅವರು ನಾಳೆ ಮಾತನಾಡುತ್ತಾರೆ. ಅದರೆ ಇದು ಬಹಳ ಗುರುತರವಾದಂಥ ವಿಚಾರ. ಇಡೀ ರಾಜ್ಯದ ಜನರ ಗಮನವನ್ನು ಸೆಳೆದಿರತಕ್ಕಂಥಾದ್ದು.

ಛೇರ್ಮನ್:- ಈಗ ಸದನವನ್ನು ನಾಳೆ ಬೆಳಿಗ್ಗೆ ೧೦-೦೦ ಗಂಟೆಗೆ ಸೇರುವಂತೆ. ಮುಂದೂಡಲಾಗಿದೆ.

(ಸದನವು ಸಂಜೆ ೬-೦೦ ಗಂಟೆ ೨೬ ನಿಮಿಷಕ್ಕೆ ಮುಕ್ತಾಯಗೊಂಡು. ಪುನಃ ದಿನಾಂಕ:೨೯-೦೩-೦೫ನೇ ಮಂಗಳವಾರ ಬೆಳಿಗ್ಗೆ ೧೦-೦೦ ಗಂಟೆಗೆ ಸೇರಲು ನಿಶ್ಚಯಿಸಿತು.)